KAMS210000362023

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹೆಚ್.ಡಿ.ಕೋಟೆ**

:**ಉಪಸ್ಥಿತರು**:

ಶ್ರೀ.ಸಂತೋಷ ಕೊಠಾರಿ, ಬಿ.ಎ.ಎಲ್, ಎಲ್.ಎಲ್.ಬಿ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಹೆಚ್.ಡಿ.ಕೋಟೆ

C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಹೆಚ್.ಡಿ.ಕೋಟೆ

**ದಿನಾಂಕಃ 28 ನೇ ಏಪ್ರಿಲ್ 2026**

**ಕ್ರಿಮಿನಲ್ ಪ್ರಕರಣ ಸಂಖ್ಯೆ: 4/2023**

ಪಿರ್ಯಾದುದಾರರುಃ ರಾಜ್ಯದ ಪರವಾಗಿ
ಸರಗೂರು ಪೊಲೀಸ್ ಠಾಣೆ
(ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

ಆರೋಪಿಗಳುಃ

1. ಶ್ರೀ.ವೆಂಕಟೇಶನಾಯಕ ಬಿನ್ ವೆಂಕಟನಾಯಕ,
ವಯಸ್ಸು 62 ವರ್ಷ
2 ಶ್ರೀ.ಗೋವಿಂದನಾಯಕ ಬಿನ್ ವೆಂಕಟೇಶನಾಯಕ,
ವಯಸ್ಸು 40 ವರ್ಷ
3 ಶ್ರೀಮತಿ.ರೇಖಾ ಕೋಂ ಗೋವಿಂದನಾಯಕ,
ವಯಸ್ಸು 35 ವರ್ಷ
4 ಶ್ರೀ.ಶಿವಣ್ಣ ನಾಯಕ ಬಿನ್ ಚಿಕ್ಕನಾಯಕ,
ವಯಸ್ಸು 58 ವರ್ಷ
ವಾಸಃ ಮೊಸರಹಳ್ಳ ಗ್ರಾಮ,
ಸರಗೂರು ತಾಲ್ಲೂಕು,
ಮೈಸೂರು ಜಿಲ್ಲೆ.
5 ಶ್ರೀ.ವೆಂಕಟನಾಯಕ ಬಿನ್ ಲೇಟ್.ಚನ್ನನಾಯಕ,
ವಯಸ್ಸು 87 ವರ್ಷ

**ಆರೋಪಿ ನಂ.1 ರಿಂದ 3 ಮತ್ತು 5 ರವರ**
**ವಾಸಃ 1 ನೇ ವಾರ್ಡ್, ಸರಗೂರು ಟೌನ್,**
**ಸರಗೂರು ತಾಲ್ಲೂಕು,**
**ಮೈಸೂರು ಜಿಲ್ಲೆ.**

(ಆ-1 ರಿಂದ 5: ಶ್ರೀ.ಎಸ್.ಆರ್.ಎಂ, ವಕೀಲರು)

| | | |
|---|---|---|
| 1 | ಘಟನೆ ನಡೆದ ದಿನಾಂಕ | 30.06.2022 |
| 2 | ಘಟನೆ ವರದಿ ಮಾಡಿದ ದಿನಾಂಕ | 30.06.2022 |
| 3 | ಆರೋಪಿಯ ಬಂಧನದ ವಿವರ<br>ಅಃ ಬಂಧನದ ದಿನಾಂಕ<br>ಆಃ ಜಾಮೀನಿನ ಮೇಲೆ<br>ಬಿಡುಗಡೆಯಾದ ದಿನಾಂಕ | 1 ರಿಂದ 5 ನೇ ಆರೋಪಿಗಳು ಜಾಮೀನಿನ ಮೇಲೆ ಇರುತ್ತಾರೆ |
| 4 | ಪಿರ್ಯಾದುದಾರರ ಹೆಸರು | ಗೋವಿಂದನಾಯಕ |
| 5 | ವಿಚಾರಣೆ ಪ್ರಾರಂಭವಾದ ದಿನಾಂಕ | 18.07.2025 |
| 6 | ವಿಚಾರಣೆ ಮುಕ್ತಾಯವಾದ ದಿನಾಂಕ | 31.12.2025 |
| 7 | ಆರೋಪಿಸಲ್ಪಟ್ಟ ಅಪರಾಧಗಳು | ಭಾ.ದಂ.ಸಂ.ಕಲಂ 143, 147, 427, 324, 506 ಮತ್ತು 114 ಸಹವಾಚಕ 149 ರಡಿಯಲ್ಲಿ |
| 8 | ನ್ಯಾಯಾಧೀಶರ ಅಭಿಪ್ರಾಯ | ಭಾ.ದಂ.ಸಂ.ಕಲಂ 143, 147, 427, 324, 506 ಮತ್ತು 114 ಸಹವಾಚಕ 149 ರ ರೀತ್ಯಾದಂಡನೀಯ ಅಪರಾಧ<br>ಆರೋಪಗಳಿಂದ 1 ರಿಂದ 5 ನೇ ಆರೋಪಿಗಳನ್ನು ದೋಷಮುಕ್ತಗೊಳಿಸಿ ಅವರ ಬಿಡುಗಡೆಗೆ ಆದೇಶಿಸಲಾಗಿದೆ. |

(**ಸಂತೋಷ ಕೊಠಾರಿ**)
C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಹೆಚ್.ಡಿ.ಕೋಟೆ .

**::ತೀರ್ಪು ::**

ಆರಕ್ಷಕ ಉಪನಿರೀಕ್ಷಕರು, ಸರಗೂರು ಪೋಲೀಸ್ ಠಾಣೆ ಇವರು ಆರೋಪಿಗಳ ವಿರುದ್ಧ ಭಾ.ದಂ.ಸಂ.ಕಲಂ 143, 147, 427, 324, 506 ಮತ್ತು 114 ಸಹವಾಚಕ 149 ರ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆ ಮೊಕದ್ದಮೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.**

ದಿನಾಂಕ 30.06.2022 ರಂದು ಮಧ್ಯಾಹ್ನ 12 ಗಂಟೆಗೆ ಸರಗೂರು ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಹೊಸಬಿದರಹಳ್ಳಿ ಗ್ರಾಮದ ಸರ್ವೇ ನಂ.4 ರ ಜಮೀನಿನಲ್ಲಿ ಆರೋಪಿಗಳು ಅಕ್ರಮ ಗುಂಪು ಕಟ್ಟಿಕೊಂಡು ಕೈಯಲ್ಲಿ ಮಚ್ಚು, ದೊಣ್ಣೆಯನ್ನು ಹಿಡಿದುಕೊಂಡು ಸಾಕ್ಷಿ-1 ಮತ್ತು 2 ರವರು ಜಮೀನಿನಲ್ಲಿ ನೆಟ್ಟಿದ್ದ ಕಲ್ಲು ಕಂಬಗಳನ್ನು ಮುರಿದು ಸುಮಾರು 30 ಸಾವಿರಗಳಷ್ಟು ನಷ್ಟ ಉಂಟು ಮಾಡಿದ್ದಲ್ಲದೇ, ಕೇಳಲು ಬಂದ ಸಾಕ್ಷಿ-1 ರವರಿಗೆ 1 ನೇ ಆರೋಪಿ ಮಚ್ಚಿನಿಂದ ತಲೆಗೆ ಹೊಡೆಯಲು ಹೋದಾಗ ಸಾಕ್ಷಿ-1 ರವರು ತನ್ನ ಕೈಯನ್ನು ಅಡ್ಡ ಹಿಡಿದುಕೊಂಡಾಗ ಸಾಕ್ಷಿ-1 ರವರ ಕೈಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಬಿಡಿಸಲು ಹೋದ ಸಾಕ್ಷಿ-2 ರವರಿಗೆ 2 ನೇ ಆರೋಪಿ ದೊಣ್ಣೆಯಿಂದ ಬಲಪಕ್ಕೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯ ಉಂಟು ಮಾಡಿದ್ದಲ್ಲದೇ, 3 ಮತ್ತು 4 ನೇ ಆರೋಪಿಗಳು ಅವರುಗಳನ್ನು ಬಿಡಬೇಡಿ ಕೊಲೆ ಮಾಡಿ ಎಂದು ಕೊಲೆ ಬೆದರಿಕೆ ಹಾಕಿದ್ದಲ್ಲದೇ, 5 ನೇ ಆರೋಪಿ ಸಾಕ್ಷಿ-1 ಮತ್ತು 2 ರವರುಗಳಿಗೆ ಹೊಡೆಯಿರಿ ಎಂದು ಕುಮ್ಮಕ್ಕು ನೀಡಿರುವುದು ತನಿಖೆಯಿಂದ ಸಾಭೀತಾಗಿರುವುದಾಗಿ ಸರಗೂರು ಪೋಲೀಸರು ಆರೋಪಿಗಳ ವಿರುದ್ಧ ಭಾ.ದಂ.ಸಂ.ಕಲಂ. 143, 147, 427, 324, 506 ಮತ್ತು 114 ಸಹವಾಚಕ 149 ರ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷಾರೋಪಣೆಯ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ಆರೋಪಿಗಳು ತಮ್ಮ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಈ ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡಿರುತ್ತಾರೆ.

4. ತನಿಖಾಧಿಕಾರಿಗಳು ತನಿಖಾ ಕಾರ್ಯ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯ ಆರೋಪಿಗಳ ವಿರುದ್ಧ ಭಾ.ದಂ.ಸಂ.ಕಲಂ 143, 147, 427, 324, 506 ಮತ್ತು 114 ಸಹವಾಚಕ 149 ರ ಶಿಕ್ಷಾರ್ಹ ಅಪರಾಧಗಳಿಗಾಗಿ ಸಂಜ್ಞೆಯತೆಯನ್ನು ತೆಗೆದುಕೊಂಡಿದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಂತೆ ಆರೋಪಿಗಳಿಗೆ ದೋಷಾರೋಪಣಾ ಪಟ್ಟಿಯ ನಕಲನ್ನು ಜಾರಿಗೊಳಿಸಿದೆ. ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಲಾಯಿತು (Heard before charge). ಆದರೆ 1 ರಿಂದ 5 ನೇ ಆರೋಪಿಗಳನ್ನು ದೋಷಾರೋಪಣೆ ರಚಿಸುವ ಪೂರ್ವದಲ್ಲಿಯೇ ವಿಮೋಚನೆ ಮಾಡಲು ಯಾವುದೇ ಸಕಾರಣಗಳು ಈ ನ್ಯಾಯಾಲಯಕ್ಕೆ ಕಂಡುಬರದ ಕಾರಣ ದೋಷಾರೋಪಣೆಯನ್ನು ರಚಿಸಲಾಯಿತು.

5. 1 ರಿಂದ 5 ನೇ ಆರೋಪಿಗಳ ವಿರುದ್ಧ ಭಾ.ದಂ.ಸಂ.ಕಲಂ 143, 147, 427, 324, 506 ಮತ್ತು 114 ಸಹವಾಚಕ 149 ರ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷಾರೋಪಣೆಯನ್ನು ರಚಿಸಿ, ಓದಿ, ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ಹೇಳಿದ್ದು, ಆರೋಪಿಗಳು ತಾವು ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

6. ಅಭಿಯೋಜನೆಯು 1 ರಿಂದ 5 ನೇ ಆರೋಪಿಗಳ ವಿರುದ್ಧ ಆರೋಪಗಳನ್ನು ಸಂದೇಹಾತೀತವಾಗಿ ರುಜುವಾತುಪಡಿಸಲು ಅಂತಿಮ ದೋಷಾರೋಪಣ ಪಟ್ಟಿಯಲ್ಲಿ ಕಾಣಿಸಿರುವ ಒಟ್ಟು 7 ಜನ ಸಾಕ್ಷಿದಾರರನ್ನು ಫ್ರಾಸಾ-1 ರಿಂದ ಫ್ರಾಸಾ-7 ಎಂದು ವಿಚಾರಣೆಗೆ ಒಳಪಡಿಸಿ 5 ದಾಖಲೆಗಳನ್ನು ನಿಪಿ-1 ರಿಂದ 5 ರಂತೆ ಹಾಗೂ ಕಲ್ಲು, ದೊಣ್ಣೆ ಮತ್ತು ಮಚ್ಚನ್ನು ಮುದ್ದೆ ಮಾಲುಗಳನ್ನು 1 ರಿಂದ 3 ರಂತೆ ಗುರುತಿಸಿಕೊಂಡಿದ್ದಾರೆ.

7. ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ 1 ರಿಂದ 5 ನೇ ಆರೋಪಿಗಳ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು. 1 ರಿಂದ 5 ನೇ ಆರೋಪಿಗಳು ತಮ್ಮ ಪ್ರತಿರಕ್ಷೆಯಲ್ಲಿ ಯಾವುದೇ ಸಾಕ್ಷಿ ವಿಚಾರಣೆ ಮಾಡಿರುವುದಿಲ್ಲ ಹಾಗೂ ದಾಖಲೆ ಹಾಜರುಪಡಿಸಿರುವುದಿಲ್ಲ.

8. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

9. ಅಭಿಯೋಜನೆಯು 1 ರಿಂದ 5 ನೇ ಆರೋಪಿಗಳ ವಿರುದ್ಧ ಮಾಡಿರುವ ಆರೋಪದ ರೀತ್ಯಾ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

**<u>ಅಂಶಗಳು</u>**

***ಅಂಶ :1:*** *ದಿನಾಂಕಃ 30.06.2022 ರಂದು ಮಧ್ಯಾಹ್ನ 12 ಗಂಟೆಗೆ ಸರಗೂರು ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಹೊಸಬಿದರಹಳ್ಳಿ ಗ್ರಾಮದ ಸರ್ವೇ ನಂ.4 ರ ಜಮೀನಿನಲ್ಲಿ 1 ರಿಂದ 5 ನೇ ಆರೋಪಿಗಳು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡಿದ್ದು, ಆ ಮೂಲಕ ಆರೋಪಿಗಳು ಭಾ.ದಂ.ಸಂ.ಕಲಂ.143 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತು ಪಡಿಸುವರೇ?*

***ಅಂಶ:2:*** *ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳು ಕೃತ್ಯವನ್ನು ಮುಂದುವರೆಸುತ್ತಾ, ಅಕ್ರಮ ಕೂಟ ಕಟ್ಟಿಕೊಂಡು ಮಾರಾಕಾಸ್ತ್ರಗಳಾದ ಮಚ್ಚು, ದೊಣ್ಣೆಯನ್ನು ಹಿಡಿದುಕೊಂಡು ಚಾಸಾ–**1** ಮತ್ತು **2** ರವರೊಂದಿಗೆ ಜಗಳ ತೆಗೆದು, ದೊಂಬಿ ಉಂಟು ಮಾಡಿದ್ದು, ಆ ಮೂಲಕ ಆರೋಪಿಗಳು ಭಾ.ದಂ.ಸಂ.ಕಲಂ.147 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತು ಪಡಿಸುವರೇ?*

***ಅಂಶ:3:*** *ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳು ಕೃತ್ಯವನ್ನು ಮುಂದುವರೆಸುತ್ತಾ, ಸಾಕ್ಷಿ–1 ಮತ್ತು 2 ರವರು ಸರ್ವೇ ನಂ.4 ರ ಜಮೀನಿನಲ್ಲಿ ನೆಟ್ಟಿದ್ದ ಕಲ್ಲು ಕಂಬಗಳನ್ನು ಮುರಿದು ಹಾಕಿ ಸುಮಾರು 30 ಸಾವಿರಗಳಷ್ಟು ನಷ್ಟ ಉಂಟು ಮಾಡಿದ್ದು, ಆ ಮೂಲಕ ಆರೋಪಿಗಳು*

*ಭಾ.ದಂ.ಸಂ.ಕಲಂ.427 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತು ಪಡಿಸುವರೇ?*

***ಅಂಶ:4***: *ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳು ಕೃತ್ಯವನ್ನು ಮುಂದುವರೆಸುತ್ತಾ, ಸಾಕ್ಷಿ-1 ರವರು ಕೇಳಲು ಬಂದಾಗ, 1 ನೇ ಆರೋಪಿ ಮಚ್ಚಿನಿಂದ ತಲೆಗೆ ಹೊಡೆಯಲು ಹೋದಾಗ ಸಾಕ್ಷಿ-1 ರವರು ತನ್ನ ಕೈಯನ್ನು ಅಡ್ಡ ಹಿಡಿದುಕೊಂಡಾಗ ಸಾಕ್ಷಿ-1 ರವರ ಕೈಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಬಿಡಿಸಲು ಹೋದ ಸಾಕ್ಷಿ-2 ರವರಿಗೆ 2 ನೇ ಆರೋಪಿ ದೊಣ್ಣೆಯಿಂದ ಬಲಪಕ್ಕೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯ ಉಂಟು ಮಾಡಿದ್ದು, ಆ ಮೂಲಕ ಆರೋಪಿಗಳು ಭಾ.ದಂ.ಸಂ.ಕಲಂ 324 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತು ಪಡಿಸುವರೇ?*

***ಅಂಶ :5:*** *ಐದನೇಯದಾಗಿ, ಮೇಲೆ ಹೇಳಲಾದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿಗಳು ಕೃತ್ಯವನ್ನು ಮುಂದುವರೆಸುತ್ತಾ, 3 ಮತ್ತು 4 ನೇ ಆರೋಪಿಗಳು ಸಾಕ್ಷಿ-1 ಮತ್ತು 2 ರವರನ್ನು ಬಿಡಬೇಡಿ ಕೊಲೆ ಮಾಡಿ ಎಂದು ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಗಳು ಭಾ.ದಂ.ಸಂ.ಕಲಂ 506 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತು ಪಡಿಸುವರೇ?*

***ಅಂಶ :6:*** *ಕೊನೇಯದಾಗಿ ಮೇಲೆ ಹೇಳಲಾದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿಗಳು ಕೃತ್ಯವನ್ನು ಮುಂದುವರೆಸುತ್ತಾ, 5 ನೇ ಆರೋಪಿ ಸಾಕ್ಷಿ-1 ಮತ್ತು 2 ರವರುಗಳಿಗೆ ಹೊಡೆಯಿರಿ ಎಂದು ಗಲಾಟೆ ಮಾಡಲು ಇತರೆ ಆರೋಪಿಗಳಿಗೆ ಕುಮ್ಮಕ್ಕು ನೀಡಿದ್ದು, ಆ ಮೂಲಕ ಆರೋಪಿಗಳು ಭಾ.ದಂ.ಸಂ.ಕಲಂ 114 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತು ಪಡಿಸುವರೇ?*

***ಅಂಶ :7:*** *ಏನು ಆದೇಶ?*

10. ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುವ ಮೇಲ್ಕಂಡ ಅಂಶಗಳಿಗೆ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಈ ನ್ಯಾಯಾಲಯವು ಉತ್ತರಿಸಿದೆ.

ಅಂಶ :1: ರಿಂದ :6: ನಕಾರಾತ್ಮಕವಾಗಿ

ಅಂಶ :7: ಅಂತಿಮ ಆದೇಶದಂತೆ, ಈ ಕೆಳಕಂಡ ಕಾರಣಗಳಿಗಾಗಿ.

## <u>ಕಾರಣಗಳು</u>

11. **<u>ಅಂಶ:1 ರಿಂದ 6</u>**: ಅಂಶ 1 ರಿಂದ 6 ಒಂದಕ್ಕೊಂದು ಪೂರಕವಾಗಿರುವುದರಿಂದ ಒಂದು ಅಂಶದ ಮೇಲಿನ ಚರ್ಚೆಯು ಮತ್ತೆ ಐದು ಅಂಶದಲ್ಲಿನ ಚರ್ಚೆಯಲ್ಲಿ ಪುನರಾವರ್ತನೆಯಾಗುವುದರಿಂದ, ಆರು ಅಂಶಗಳನ್ನು ಒಟ್ಟಿಗೆ ವಿಮರ್ಶೆಗೆ ತೆಗೆದುಕೊಳ್ಳಲಾಯಿತು.

12. ಈ ಪ್ರಕರಣದಲ್ಲಿ ಅಭಿಯೋಜನೆಯು ಹಾಜರುಪಡಿಸಿರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಈ ಪ್ರಕರಣದ ಪಿರ್ಯಾದಿಯಾದ ಚಾಸಾ–1ರವರನ್ನು ಫ್ರಾಸಾ–1 ಎಂದು ವಿಚಾರಣೆಗೊಳಪಡಿಸಿದ್ದು, ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ದಿಃ30.06.2022 ರಲ್ಲಿ ಮಧ್ಯಾಹ್ನ 11.00 ಗಂಟೆಗೆ ತಾನು ಮನೆಯಲ್ಲಿ ಇದ್ದಾಗ ನಿಮ್ಮ ಜಮೀನಿನಲ್ಲಿ ಬೇಲಿ ಕಿತ್ತು ಹಾಕುತ್ತಿದ್ದಾರೆ ಎಂದು ಬೇರೆಯವರು ತಿಳಿಸಿದ್ದು, ತಾನು ಹೋಗಿ ನೋಡಿದಾಗ ಆರೋಪಿತರು 50 ತಂತಿ ಕಂಬಗಳನ್ನು ಮುರಿದು ತಂತಿ ಕತ್ತರಿಸಿರುತ್ತಾರೆ. ಅದನ್ನು ಕೇಳಿದಕ್ಕೆ ಆರೋಪಿ 2 ರವರು ಕಡಕತ್ತಿಯನ್ನು ತೆಗೆದು ಹಲ್ಲೆ ಮಾಡಲು ಯತ್ನಿಸಿದಾಗ ಅದು ಬೆರಳಿಗೆ ತಾಗಿರುತ್ತದೆ. ಅಷ್ಟರಲ್ಲಿ ಚಾಸಾ-2 ಮತ್ತು 3 ಬಂದಿರುತ್ತಾರೆ. ಅವರಿಗೂ ಸಹ ಹೊಡೆದಿರುತ್ತಾರೆ, ನಂತರ ಚಾಸಾ-2 ರವರು ತನ್ನನ್ನು ಸರಗೂರು ಸರ್ಕಾರಿ ಆಸ್ಪತ್ರೆಗೆ ಸೇರಿಸಿರುತ್ತಾರೆ. ಅದೇ ದಿನ ದೂರು ದಾಖಲಿಸಿರುತ್ತೇನೆ ಎಂದು ಸಾಕ್ಷ್ಯನುಡಿದಿರುತ್ತಾರೆ. ನಂತರ ಫ್ರಾಸಾ–1ರವರನ್ನು ಆರೋಪಿಗಳ ಪರ ವಕೀಲರು ಪಾಟಿಸವಾಲು ನಡೆಸಿದ್ದು ಅವರು ತನ್ನ ಪಾಟಿಸವಾಲಿನಲ್ಲಿ ಚಾಸಾ-2 ರವರ ಇಬ್ಬರು ಮಕ್ಕಳು ಪೊಲೀಸ್ ಎಂದರೆ ಸರಿ. ಚಿಕ್ಕ ಎಂಬುವವರು ಆರೋಪಿತರ ಜಮೀನಿನಲ್ಲಿ ಕಲ್ಲು ಕಂಬಗಳನ್ನು ಕಿತ್ತಾಕುತ್ತಿರುವ ವಿಷಯ ತಿಳಿಸಿರುತ್ತಾರೆ. ಚಿಕ್ಕ ಎಂಬುವವರು ನನಗೆ ಸಂಬಂಧಿಕರು ಅಲ್ಲ. ಕಲ್ಲು ಮುರಿದಿರುವ ಬಗ್ಗೆ ಛಾಯಾಚಿತ್ರಗಳನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ಮನೆಯಿಂದ ಸದರಿ ಜಮೀನಿಗೆ ಅರ್ಧ ಕೀ.ಮೀ ದೂರ ಆಗುತ್ತದೆ. ಆರೋಪಿತರು ಆ ರೀತಿ ಯಾವುದೇ ಕೃತ್ಯ ಮಾಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾರು ಹಲ್ಲೆ ಮಾಡಿರುತ್ತಾರೆ ಎಂದು ವೈದ್ಯರ ಮುಂದೆ ಹೇಳಿರುತ್ತೇನೆ.

ಆಸ್ಪತ್ರೆಯಲ್ಲಿ ನನಗೆ ಪ್ರಜ್ಞೆ ಇರಲಿಲ್ಲ. 2 ದಿನಗಳ ಕಾಲ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಚಾಸಾ-2 ರವರಿಗೆ ಹೊಡೆದಿರುತ್ತಾರೆ ಎಂದು ದೂರಿನಲ್ಲಿ ಹೇಳಿರುತ್ತೇನೆ. ನಿಪಿ-1 ನ್ನು ನನ್ನ ಅಣ್ಣ ಬರೆಸಿರುತ್ತಾರೆ. ನಿಪಿ-1 ರಲ್ಲಿ ಇರುವ ವಿಚಾರ ತನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿತರು ನನ್ನ ವಿರುದ್ಧವು ಸಹ ದೂರು ದಾಖಲಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ OS 188/22 ರಂತೆ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ತಾತ್ಕಾಲಿಕ ತಡೆ ಆಜ್ಞೆ ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

13. ಇನ್ನು ಈ ಪ್ರಕರಣದ ಗಾಯಾಳು ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ−2 ರವರನ್ನು ಫ್ರಾಸಾ−2 ಎಂದು ವಿಚಾರಣೆಗೂಳಪಡಿಸಿದ್ದು, ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ದಿಃ30.06.2022 ರಲ್ಲಿ ಮಧ್ಯಾಹ್ನ 12.00 ಗಂಟೆಗೆ ತಾನು ಮನೆಯಲ್ಲಿ ಇದ್ದಾಗ ಪಕ್ಕದ ಜಮೀನಿನವರು ನಿಮ್ಮ ಜಮೀನಿನಲ್ಲಿ ಬೇಲಿ ಕಿತ್ತು ಹಾಕುತ್ತಿದ್ದಾರೆ ಎಂದು ತಿಳಿಸಿರುತ್ತಾರೆ. ಆಗ ಚಾಸಾ-1 ರವರು ಮೊದಲು ಹೋಗಿದ್ದು, ನಂತರ ತಾನು ಹೋಗಿರುತ್ತೇನೆ. ತಾನು ಹೋಗುವಷ್ಟರಲ್ಲಿ ಚಾಸಾ-1 ರವರಿಗೆ ಆರೋಪಿತರು ಎಲ್ಲರೂ ಸೇರಿ ಮಚ್ಚು ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ. ಆರೋಪಿ 1 ರಿಂದ 4 ರವರು ತನಗೆ ಹೊಡೆದಿರುತ್ತಾರೆ. ನಂತರ ತನ್ನ ಮಗ ಪ್ರಕಾಶ ಬಂದು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ವಿಚಾರವಾಗಿ ತಾನು ಹೇಳಿಕೆ ಕೊಟ್ಟಿರುತ್ತೇನೆ. ಅದೇ ದಿನ ಪೊಲೀಸರು ಸ್ಥಳ ಮಹಜರ ಜರುಗಿಸಿದ್ದು, ಚಾಸಾ-4 ಮತ್ತು 5 ರವರು ಸದರಿ ಮಹಜರ್ ಗೆ ಸಹಿ ಮಾಡಿರುತ್ತಾರೆ. ತನ್ನ ಸಮಕ್ಷಮ ಮುದ್ದೆಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನಂತರ ಫ್ರಾಸಾ−2 ರವರನ್ನು ಆರೋಪಿಗಳ ಪರ ವಕೀಲರು ಪಾಟಿಸವಾಲು ನಡೆಸಿದ್ದು ಅವರು ತನ್ನ ಪಾಟಿಸವಾಲಿನಲ್ಲಿ ಸದರಿ ದಿನ ನಾನು ಮನೆಯಲ್ಲಿ ಇದ್ದೆ. ನನಗೆ 11.30 ಗಂಟೆಯಲ್ಲಿ ಪಕ್ಕದ ಜಮೀನಿನವರಾದ ಸುರೇಶ ರವರು ವಿಷಯ ತಿಳಿಸಿರುತ್ತಾರೆ. ಚಾಸಾ-1 ರವರು ಹೋದ 15

ನಿಮಿಷ ನಂತರ ತಾನು ಹೋಗಿರುತ್ತೇನೆ. ತಾನು ಹೋದಾಗ ಚಾಸಾ-1 ರವರನ್ನು ಹೊಡೆಯುತ್ತಿದ್ದರು. 2 ಗಂಟೆಗೆ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ 3 ದಿನ ಇರುತ್ತೇನೆ. ಆರೋಪಿತರು ನಮ್ಮ ವಿರುದ್ಧ OS 188/22 ರಂತೆ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ತಾತ್ಕಾಲಿಕ ತಡೆ ಆಜ್ಞೆ ಆದೇಶ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಆರೋಪಿತರು ತಮ್ಮ ವಿರುದ್ಧ CR 83/2022 ರಂತೆ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಆಸ್ಪತ್ರೆಯಲ್ಲಿ ತನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಕೃತ್ಯ ನಡೆದ ಸ್ಥಳದ ಪೋಟೋಗಳನ್ನು ಪೊಲೀಸರು ತೆಗೆದಿರುತ್ತಾರೆ. ಮುದ್ದೆಮಾಲುಗಳನ್ನು ಪೊಲೀಸರೇ ತೆಗೆದುಕೊಂಡಿರುತ್ತಾರೆ. ಮುದ್ದೆಮಾಲುಗಳ ಮೇಲೆ ತನ್ನ ಸಹಿ ಪಡೆದಿರುವುದಿಲ್ಲ. ತನ್ನ ಮಕ್ಕಳು ಪೊಲೀಸ್ ಎಂದರೆ ಸರಿ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

14. ಇನ್ನು ಈ ಪ್ರಕರಣದ ಇನ್ನೊಬ್ಬ ಪ್ರತ್ಯಕ್ಷ ಸಾಕ್ಷೀದಾರರಾದ ಚಾಸಾ–3 ರವರನ್ನು ಫ್ರಾಸಾ–3 ಎಂದು ವಿಚಾರಣೆಗೊಳಪಡಿಸಿದ್ದು, ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ಚಾಸಾ 1 ಮತ್ತು 2 ರವರಿಗೂ ಆರೋಪಿತರಿಗೂ 3 ವರ್ಷಗಳ ಹಿಂದೆ ಗಲಾಟೆ ಆಗಿರುತ್ತದೆ. ಆರೋಪಿತರು ಪಕ್ಕದ ಜಮೀನವರು. ಆರೋಪಿತರು ಚಾಸಾ 1 ಮತ್ತು 2 ರವರ ಜಮೀನಿನಲ್ಲಿ ಕಲ್ಲು ಕಂಬ ಕೀಳುತ್ತಿದ್ದಾರೆ ಎಂದು ತಾನು ಚಾಸಾ 1 ರವರಿಗೆ ತಿಳಿಸಿದ್ದು, ಆಗ ಚಾಸಾ 1 ರವರು ಜಮೀನು ಬಳಿ ಹೋಗಿರುತ್ತಾರೆ. ಚಾಸಾ 1 ರವರಿಗೆ ಆರೋಪಿ 1 ಮತ್ತು 2 ರವರು ಮಚ್ಚು ಮತ್ತು ದೊಣ್ಣೆಯಿಂದ ತಲೆಗೆ ಹೊಡೆದಿರುತ್ತಾರೆ. ಆರೋಪಿಗಳು ಸುಮಾರು 50 ತಂತಿ ಕಂಬಗಳನ್ನು ಒಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇನ್ನು ಫ್ರಾಸಾ–3 ರವರನ್ನು ಆರೋಪಿಗಳ ಪರ ವಕೀಲರು ಪಾಟಿ ಸವಾಲು ನಡೆಸಿದ್ದು, ಅವರು ತಮ್ಮ ಪಾಟೀಸವಾಲಿನಲ್ಲಿ ಚಾಸಾ 1 ಮತ್ತು 2 ತನ್ನ ಸಹೋದರರು. ಸದರಿ ದಿನ 11.30 ಗಂಟೆ ಸಮಯದಲ್ಲಿ ತಾನು ಜಮೀನಿನಲ್ಲಿ ಕಳೆ ತೆಗೆಯುತ್ತಿದ್ದೆ. ಸದರಿ ಸಮಯದಲ್ಲಿ ಅಕ್ಕ ಪಕ್ಕದ ಜಮೀನಿನವರು ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಜಮೀನಿಂದ ಊರಿಗೆ ಅರ್ಧ ಕಿ.ಮೀ ಆಗುತ್ತದೆ.

ತಾನು ಮನೆಗೆ ಬಂದಾಗ 11.30 ಆಗಿತ್ತು. ಆರೋಪಿ 1 ರವರು OS 188/20 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ತೊಂದರೆ ಕೊಡಬಾರದು ಎಂದು ಆದೇಶ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

15. ಇನ್ನು ಈ ಪ್ರಕರಣದಲ್ಲಿ ಮತ್ತೊಬ್ಬ ಪ್ರತ್ಯಕ್ಷ ಸಾಕ್ಷಿದಾರರು ಮತ್ತು ಮಹಜರ್ ಸಾಕ್ಷಿದಾರರಾದ ಚಾಸಾ-4 ರವರನ್ನು ಫ್ರಾಸಾ-4 ಎಂದು ವಿಚಾರಣೆಗೊಳಪಡಿಸಿದ್ದು, ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ದಿಃ 30.06.2022 ರಂದು 12 ಗಂಟೆ ಸಮಯದಲ್ಲಿ ತಾನು ಸ್ಥಳಕ್ಕೆ ಹೋದಾಗ ಗಲಾಟೆ ನಡೆಯುತ್ತಿತ್ತು. ತಾನು ಹೋಗುವಷ್ಟರಲ್ಲಿ ಆರೋಪಿತರು ಚಾಸಾ 1 ಮತ್ತು 2 ರವರಿಗೆ ಮಚ್ಚು ಮತ್ತು ದೊಣ್ಣೆಯಿಂದ ಹೊಡೆದಿರುತ್ತಾರೆ. ಸುಮಾರು 50 ಕಂಬಗಳನ್ನು ಆರೋಪಿತರು ಮುರಿದು ಹಾಕಿದ್ದರು. ಚಾಸಾ 1 ರವರ ಬಲ ಕೈಯಲ್ಲಿ ರಕ್ತ ಬರುತ್ತಿತ್ತು, ಚಾಸಾ 2 ರವರ ಭುಜಕ್ಕೆ ಗಾಯ ಆಗಿತ್ತು. ತಾನು ಮತ್ತು ಚಾಸಾ 3 ರವರು ಜಗಳ ಬಿಡಿಸಿ ಸಮಾಧಾನ ಮಾಡಿರುತ್ತೇವೆ. ನಂತರ ಚಾಸಾ 1 ಮತ್ತು 2 ರವರನ್ನು ಕಾರಿನಲ್ಲಿ ಆಸ್ಪತ್ರೆಗೆ ಕಳುಹಿಸಿರುತ್ತೇವೆ. ಗಲಾಟೆ ನಡೆದ ದಿನವೇ 5 ಗಂಟೆ ಸಮಯದಲ್ಲಿ ಪೊಲೀಸರು ಸ್ಥಳಕ್ಕೆ ಬಂದಿದ್ದು, ಮಹಜರ ಮಾಡಿ ತನ್ನ ಸಮಕ್ಷಮ ಮುದ್ದೆಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಿಪಿ 2 ಕ್ಕೆ ತಾನು, ಚಾಸಾ 3 ಮತ್ತು 5 ಸಹಿ ಮಾಡಿರುತ್ತೇವೆ. ಸದರಿ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ನಂತರ ಫ್ರಾಸಾ-4 ರವರನ್ನು ಆರೋಪಿಗಳ ಪರ ವಕೀಲರು ಪಾಟಿಸವಾಲು ನಡೆಸಿದ್ದು ಅವರು ತನ್ನ ಪಾಟಿಸವಾಲಿನಲ್ಲಿ ಚಾಸಾ 1 ಮತ್ತು 2 ತನ್ನ ಸೋದರ ಮಾವಂದಿರು ಎಂದರೆ ಸರಿ. ತಾನು ಜಮೀನು ಹತ್ತಿರ ಹೋದಾಗ 11.30-12 ಗಂಟೆ ಆಗಿತ್ತು. ಗಲಾಟೆಯನ್ನು ಯಾರು ಶುರು ಮಾಡಿರುತ್ತಾರೆ ಎಂದು ಗೊತ್ತಿಲ್ಲ ಎಂದರೆ ಸರಿ. ತಾನು ಹೋದಾಗ ಸುಮಾರು 10 ಜನ ಇದ್ದರು ಅವರ ಹೆಸರು ಗೊತ್ತಿಲ್ಲ. ಆರೋಪಿತರು ಮತ್ತು ತಮ್ಮಗಳನ್ನು ಹೊರತುಪಡಿಸಿ 8 ಜನ ಇದ್ದರು. ಸದರಿ ದಿನ ಯಾವುದೇ ಗಲಾಟೆ ಆಗಿಲ್ಲ, ತಾನು

ಸಂಬಂಧಿಕನಾಗಿದ್ದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ ಸಮಯದಲ್ಲಿ 4-5 ಜನ ಇದ್ದರು. ಸದರಿ ಸಮಯದಲ್ಲಿ ತಾನು, ಚಾಸಾ 3, 5 ಇದ್ದೆವು. ತನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಮಹಜರನಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ ಎಂದರೆ ಸರಿ. ಮುದ್ದೆಮಾಲುಗಳನ್ನು ಪೊಲೀಸರು ತೆಗೆದುಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

16. ಇನ್ನು ಈ ಪ್ರಕರಣದಲ್ಲಿ ಮತ್ತೊಬ್ಬ ಮಹಜರ್ ಸಾಕ್ಷಿದಾರರಾದ ಚಾಸಾ–5 ರವರನ್ನು ಫ್ರಾಸಾ–5 ಎಂದು ವಿಚಾರಣೆಗೊಳಪಡಿಸಿದ್ದು, ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ಚಾಸಾ 1 ಮತ್ತು ಆರೋಪಿತರಿಗೂ ಗಲಾಟೆ ಆಗಿರುವ ವಿಚಾರವಾಗಿ ತಾನು ಸಹಿ ಮಾಡಿದ್ದು, ಸದರಿ ಸಹಿಯನ್ನು 3 ವರ್ಷಗಳ ಹಿಂದೆ ಚಾಸಾ 2 ರವರ ಜಮೀನಿನಲ್ಲಿ ಮಾಡಿರುತ್ತೇನೆ. ನಿಪಿ 2 ಕ್ಕೆ ತಾನು ಮತ್ತು ಚಾಸಾ3 ರವರು ಸಹಿ ಮಾಡಿರುತ್ತೇವೆ. ತನ್ನ ಸಮಕ್ಷಮ ದೊಣ್ಣೆ, ಮಚ್ಚು ಮತ್ತು ಕಲ್ಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನಂತರ ಫ್ರಾಸಾ–5 ರವರನ್ನು ಆರೋಪಿಗಳ ಪರ ವಕೀಲರು ಪಾಟಿಸವಾಲು ನಡೆಸಿದ್ದು ಅವರು ತನ್ನ ಪಾಟಿಸವಾಲಿನಲ್ಲಿ ಚಾಸಾ 1 ಮತ್ತು 2 ರವರು ತಮ್ಮ ಊರಿನವರು ಎಂದರೆ ಸರಿ. ಸ್ಥಳಕ್ಕೆ ಬರಬೇಕು ಎಂದು ಪೊಲೀಸರು ನೋಟಿಸ್ ಕೊಟ್ಟಿರುವುದಿಲ್ಲ. ತನಗೆ ಓದಲು ಬರೆಯಲು ಬರುವುದಿಲ್ಲ. ನಿಪಿ 2 ರಲ್ಲಿ ಇರುವ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲುಗಳನ್ನು ಪೊಲೀಸರು ಜಮೀನಿನಿಂದ ತೆಗೆದುಕೊಂಡಿರುತ್ತಾರೆ. ಸ್ಥಳದಲ್ಲಿ ಇಬ್ಬರು ಇದ್ದು ಅವರ ಹೆಸರು ಗೊತ್ತಿಲ್ಲ. ತಾನು ನಿಪಿ 2 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ತಾನು ಮತ್ತು ಚಾಸಾ 1 ರವರು ಒಂದೇ ಊರಿನವರು ಆಗಿದ್ದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

17. ಇನ್ನು ಈ ಪ್ರಕರಣದಲ್ಲಿ ಚಾಸಾ–1 ರವರಿಗೆ ಚಿಕಿತ್ಸೆ ನೀಡಿದ ವೈದ್ಯಾಧಿಕಾರಿಯಾದ ಚಾಸಾ–6 ರವರನ್ನು ಫ್ರಾಸಾ–6 ಎಂದು ವಿಚಾರಣೆಗೊಳಪಡಿಸಿದ್ದು, ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ದಿಃ30.06.2022 ರಂದು ಮಧ್ಯಾಹ್ನ 1.10 ಗಂಟೆ ಸಮಯದಲ್ಲಿ ಚಾಸಾ 1

ರವರು ಅವರ ಅಣ್ಣನ ಮಗ ಪ್ರಕಾಶ್ ಎಂಬುವವರ ಜೊತೆ ಗೋವಿಂದನಾಯಕ ಮತ್ತು ವೆಂಕಟೇಶ್ ನಾಯಕ ಎಂಬುವವರು ಮಚ್ಚಿನಿಂದ ಹಲ್ಲೆ ಮಾಡಿರುತ್ತಾರೆ ಎಂಬ ಹಲ್ಲೆಯ ಚರಿತ್ರೆಯೊಂದಿಗೆ ಆಸ್ಪತ್ರೆಗೆ ಬಂದಿರುತ್ತಾರೆ. ಸದರಿ ಚಾಸಾ 1 ರವರನ್ನು ಪರೀಕ್ಷಿಸಲಾಗಿ ಅವರ ಬಲಗೈನ ತೋರುಬೆರಳಲ್ಲಿ 3X0.2 cm ಹರಿದ ಗಾಯ, ಎದೆಯ ಮೇಲ್ಭಾಗದಲ್ಲಿ ನೋವಿನ ಅನುಭವ, ಬೆನ್ನಿನ ಮೇಲ್ಭಾಗದಲ್ಲಿ ನೋವಿನ ಅನುಭವ ಹಾಗೂ ಚಾಸಾ 2 ರವರಿಗೆ ತಲೆಯ ಮೇಲ್ಭಾಗದ ಬಲಗಡೆ ನೋವಿನ ಅನುಭವ, ಬೆನ್ನಿನ ಮಧ್ಯಭಾಗದಲ್ಲಿ ನೋವಿನ ಅನುಭವ ಇದ್ದಿರುತ್ತದೆ. ಚಾಸಾ 1 ಮತ್ತು 2 ರವರಿಗೆ ಆಗಿರುವ ಗಾಯಗಳು ಸಾಮಾನ್ಯ ಸ್ವರೂಪದ ಗಾಯ ಆಗಿರುತ್ತದೆ ಎಂದು ಅಭಿಪ್ರಾಯ ಪಟ್ಟು ಅವರಿಗೆ ಚಿಕಿತ್ಸೆ ನೀಡಿ ಗಾಯದ ಪ್ರಮಾಣ ಪತ್ರವನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ನಂತರ ಫ್ರಾಸಾ–6 ರವರನ್ನು ಆರೋಪಿಗಳ ಪರ ವಕೀಲರು ಪಾಟೀಸವಾಲಿಗೊಳಪಡಿಸಿದ್ದು, ಅವರು ತನ್ನ ಪಾಟಿಸವಾಲಿನಲ್ಲಿ ಸಾಮಾನ್ಯವಾಗಿ ಆಸ್ಪತ್ರೆಯಲ್ಲಿ ಊಟದ ಸಮಯ ಮದ್ಯಾಹ್ನ 1 ರಿಂದ 1.45 ಆಗಿರುತ್ತದೆ. ಸದರಿ ದಿನ 5 ಜನರು ಬಂದಿದ್ದರು. ಅವರೆಲ್ಲರನ್ನು ಪರೀಕ್ಷೆ ಮಾಡಿರುತ್ತೇನೆ. ನಿಪಿ 3 ಮತ್ತು 4 ರಲ್ಲಿ ಪ್ರಕಾಶ್ ಎಂಬುವವರ ಹೆಸರನ್ನು ಹೊರತುಪಡಿಸಿ ಬೇರೆಯವರ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿ. ಚಾಸಾ 1 ಮತ್ತು 2 ರವರನ್ನು ಪರೀಕ್ಷಿಸುವ ಮೊದಲು ಪೊಲೀಸರಿಗೆ ತಿಳಿಸಿರುವುದಿಲ್ಲ ಹಾಗೂ ತಿಳಿಸಲು ತೊಂದರೆ ಇರಲಿಲ್ಲ. ಚಾಸಾ 1 ರವರಿಗೆ ಆಗಿರುವ ಗಾಯ ಸಾಮಾನ್ಯವಾಗಿ ಬೇಲಿ ಮುಳ್ಳಿನಿಂದ ತರಚಿದರೆ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಚಾಸಾ 2 ರವರಿಗೆ ಆಗಿರುವ ಗಾಯ ಸಾಮಾನ್ಯವಾಗಿ ಜಾಸ್ತಿ ವ್ಯವಸಾಯ ಮಾಡಿದಾಗ ಹೆಚ್ಚು ಆಯಾಸ ಆದರೆ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ಗಟ್ಟಿನೆಲದ ಮೇಲೆ ಬಿದ್ದರೆ ಆಗುವ ಸಾಧ್ಯತೆ ಇದೆ ಎಂದರೆ ಸರಿ ಎಂದು ಉತ್ತರಿಸಿರುತ್ತಾರೆ.

18. ಇನ್ನು ಈ ಪ್ರಕರಣದಲ್ಲಿ ಪ್ರಕರಣ ದಾಖಲಿಸಿ, ತನಿಖೆಯನ್ನು ಪೂರೈಸಿ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿದ ಚಾಸಾ–7 ರವರನ್ನು ಫ್ರಾಸಾ–7 ಎಂದು ವಿಚಾರಣೆಗೊಳಪಡಿಸಿದ್ದು, ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 30.06.2022 ರಂದು ತಾನು ಠಾಣಾ SHO ಆಗಿ

ಕರ್ತವ್ಯ ನಿರ್ವಹಿಸುತ್ತಿದ್ದಾಗ 03 ಗಂಟೆ ಸಮಯಕ್ಕೆ ಚಾಸಾ 1 ರವರು ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆ 82/2022 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಸಂಜೆ 5 ರಿಂದ 6 ಗಂಟೆವರೆಗೂ ಚಾಸಾ 2, 3 ಮತ್ತು 5 ರವರ ಸಮಕ್ಷಮ ಪಂಚನಾಮೆ ಜರುಗಿಸಿ ಪಂಚರ ಸಮಕ್ಷಮ ಒಂದು ಮಚ್ಚು, ಒಂದು ಕಲ್ಲು ಕಂಬದ ತುಂಡು ಮತ್ತು ಒಂದು ಕಾಡುಜಾತಿಯ ಮರದ ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡು ಠಾಣಾ ಪಿ.ಎಫ್ ಸಂಖ್ಯೆ 81/2022 ರಲ್ಲಿ ನಮೂದಿಸಿರುತ್ತೇನೆ. ಚಾಸಾ 1 ರವರ ಮರು ಹೇಳಿಕೆ ಮತ್ತು ಚಾಸಾ 2 ರಿಂದ 4 ರವರ ಹೇಳಿಕೆ ದಾಖಲು ಮಾಡಿಕೊಂಡು, ಚಾಸಾ 1 ಮತ್ತು 2 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ 6 ರವರಿಂದ ಪಡೆದುಕೊಂಡಿರುತ್ತೇನೆ. ಆರೋಪಿ 1 ಮತ್ತು 2 ರವರಿಗೆ ನೋಟಿಸ್ ಜಾರಿ ಮಾಡಿರುತ್ತೇನೆ. ನಂತರ ಆರೋಪಿತರ ವಿರುದ್ಧ ಆರೋಪ ಸಾಬೀತಾಗಿದ್ದರಿಂದ ಅಂತಿಮ ವರದಿ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ನಂತರ ಫ್ರಾಸಾ–7 ರವರನ್ನು ಆರೋಪಿಗಳ ಪರ ವಕೀಲರು ಪಾಟಿಸವಾಲು ನಡೆಸಿದ್ದು ಅವರು ತನ್ನ ಪಾಟಿಸವಾಲಿನಲ್ಲಿ ತಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಚಾಸಾ 1 ರವರು ಒಂದು ದೂರು ನೀಡಿರುತ್ತಾರೆ. ದೂರು ನೀಡಲು ಚಾಸಾ 1 ರವರು ಒಬ್ಬರೇ ಬಂದಿರುತ್ತಾರೆ. ಪಂಚರಿಗೆ ಲಿಖಿತವಾಗಿ ನೋಟಿಸ್ ಕೊಟ್ಟಿರುವುದಿಲ್ಲ, ನೋಟಿಸ್ ಕೊಡಲು ತೊಂದರೆ ಇದ್ದಿರಲಿಲ್ಲ. ನಿಪಿ 2 ನ್ನು ಸ್ಥಳಕ್ಕೆ ಹೋಗದೇ ಠಾಣೆಯಲ್ಲಿ ಸೃಷ್ಟಿಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮಹಜರ ಸಮಯದಲ್ಲಿ ಸ್ಥಳದ ಫೋಟೋ ತೆಗೆದಿರುವುದಿಲ್ಲ. ಮು.ಮಾಲುಗಳನ್ನು ಚಾಸಾ 1 ರವರು ಕೊಟ್ಟಿರುತ್ತಾರೆ. ಸದರಿ ಮು.ಮಾಲುಗಳ ಮೇಲೆ ಪಂಚರ ಸಹಿ ಪಡೆದಿರುವುದಿಲ್ಲ ಮತ್ತು ಪಡೆದುಕೊಳ್ಳಲು ತೊಂದರೆ ಇರಲಿಲ್ಲ. ರೂಪಾಯಿ 30,000/- ನಷ್ಟ ಆಗಿರುತ್ತದೆ ಎಂದು ನಮೂದಿಸಿದ್ದು ಅದಕ್ಕೆ ಸಂಬಂಧಿಸಿದ ಮೌಲ್ಯದ ಪಟ್ಟಿಯನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದುಕೊಂಡಿರುವುದಿಲ್ಲ. ಚಾಸಾ 1 ರವರ ಮಕ್ಕಳು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಚಾಸಾ 1 ರವರ ಜೊತೆ ಶಾಮಿಲಾಗಿ ಮು.ಮಾಲುಗಳನ್ನು

ಸೃಷ್ಟಿಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಲು ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

19. ಮೇಲೆ ಹೇಳಿದ ಸಾಕ್ಷಿದಾರರ ಸಾಕ್ಷ್ಯವನ್ನು, ಅಭಿಯೋಜನೆಯ ಪ್ರಕರಣವನ್ನು ಹಾಗೂ ಅಭಿಯೋಜನೆಯು ಒದಗಿಸಿದ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿ ಅಭಿಯೋಜನೆಯ ಪ್ರಕರಣಕ್ಕೂ, ಸಾಕ್ಷಿದಾರರು ನ್ಯಾಯಾಲಯದ ಮುಂದೆ ನೀಡಿರುವ ಸಾಕ್ಷ್ಯಕ್ಕೂ ಹಾಗೂ ಅಭಿಯೋಜನೆಯು ಒದಗಿಸಿದ ದಾಖಲೆಗಳಲ್ಲಿ ಹಲವಾರು ವ್ಯತಿರಿಕ್ತತೆಗಳು ಇರುವುದು ಕಂಡು ಬಂದಿದ್ದು, ಅವುಗಳು ಅಭಿಯೋಜನ ಪ್ರಕರಣವನ್ನು ರುಜುವಾತು ಪಡಿಸುವಲ್ಲಿ ಯಾವುದೇ ನಿಟ್ಟಿನಲ್ಲಿ ಸಹಕಾರಿಯಾಗಿರುವುದು ಕಂಡುಬಂದಿರುವುದಿಲ್ಲ. ಪ್ರಥಮವಾಗಿ ಅಭಿಯೋಜನೆಯ ಪ್ರಕರಣವೇನೆಂದರೆ ದಿನಾಂಕ 30.06.2022 ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಹೊಸಬಿದರಹಳ್ಳಿ ಗ್ರಾಮದ ಸರ್ವೇ ನಂ.4 ರ ಜಮೀನಿನಲ್ಲಿ ಆರೋಪಿಗಳು ಅಕ್ರಮಕೂಟ ಕಟ್ಟಿಕೊಂಡು ಕೈಯಲ್ಲಿ ಮಚ್ಚು, ದೊಣ್ಣೆಯನ್ನು ಹಿಡಿದುಕೊಂಡು ಸಾಕ್ಷಿ-1 ಹಾಗೂ 2 ರವರು ಜಮೀನಿನಲ್ಲಿ ನೆಟ್ಟಿದ್ದ ಕಲ್ಲು ಕಂಬಗಳನ್ನು ಮುರಿದು ಹಾಕಿ ಸುಮಾರು 30 ಸಾವಿರಗಳಷ್ಟು ನಷ್ಟ ಉಂಟು ಮಾಡುತ್ತಿದ್ದಾಗ, ಅದನ್ನು ಕೇಳಲು ಸಾಕ್ಷಿ-1 ರವರು ಹೋದಾಗ 1 ನೇ ಆರೋಪಿ ಸಾಕ್ಷಿ-1 ರವರಿಗೆ ಮಚ್ಚಿನಿಂದ ತಲೆಗೆ ಹೊಡೆಯಲು ಹೋದಾಗ ಸಾಕ್ಷಿ-1 ರವರು ತನ್ನ ಕೈಯನ್ನು ಅಡ್ಡ ಹಿಡಿದುಕೊಂಡಾಗ ಸಾಕ್ಷಿ-1 ರವರ ಕೈಗೆ ಸಣ್ಣ ಪುಟ್ಟ ಗಾಯವಾಗಿದ್ದು, ಆಗ ಜಗಳ ಬಿಡಿಸಲು ಸಾಕ್ಷಿ-2 ರವರು ಬಂದಾಗ 2 ನೇ ಆರೋಪಿ ದೊಣ್ಣೆಯಿಂದ ಸಾಕ್ಷಿ-2 ರವರ ಬಲಪಕ್ಕೆಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತಾರೆ ಹಾಗೂ 3 ಮತ್ತು 4 ನೇ ಆರೋಪಿಗಳು ಅವರುಗಳನ್ನು ಬಿಡಬೇಡಿ ಕೊಲೆ ಮಾಡಿ ಎಂದು ಕೊಲೆ ಬೆದರಿಕೆ ಹಾಕಿದ್ದು, ಆಗ 5 ನೇ ಆರೋಪಿ ಸಾಕ್ಷಿ-1 ಮತ್ತು 2 ರವರುಗಳಿಗೆ ಹೊಡೆಯುವಂತೆ ಇತರೆ ಆರೋಪಿಗಳಿಗೆ ಕುಮ್ಮಕ್ಕು ನೀಡಿರುತ್ತಾರೆ ಎಂಬುದಾಗಿರುತ್ತದೆ. ಆದ್ದರಿಂದ

ಅಭಿಯೋಜನೆಯು ಸದರಿ ಅಂಶಗಳನ್ನು ಸ್ಪಷ್ಟವಾದಂತಹ ಸಾಕ್ಷ್ಯಾಧಾರಗಳಿಂದ ರುಜುವಾತು ಪಡಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತದೆ.

20. ಈ ನಿಟ್ಟಿನಲ್ಲಿ ಅಭಿಯೋಜನೆಯು ವಿಚಾರಣೆಗೊಳಪಡಿಸಿದ ಸಾಕ್ಷಿದಾರರ ಸಾಕ್ಷ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿ, ಅಭಿಯೋಜನೆಯ ಪ್ರಕರಣದ ಪ್ರಮುಖ ಸಾಕ್ಷಿದಾರರು ಗಾಯಾಳು ಹಾಗೂ ಪಿರ್ಯಾದಿದಾರರು ಆದಂತಹ ಚಾಸಾ–1 ರವರು ಪ್ರಾಸಾ–1 ಎಂದು ವಿಚಾರಣೆಗೊಳಪಟ್ಟಿದ್ದು, ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ದಿಃ 30.06.2022 ರಂದು ಮಧ್ಯಾಹ್ನ 11.00 ಗಂಟೆ ಸಮಯದಲ್ಲಿ ತಾನು ಮನೆಯಲ್ಲಿ ಇದ್ದಾಗ ನಿಮ್ಮ ಜಮೀನಿನಲ್ಲಿ ಬೇಲಿ ಕಿತ್ತು ಹಾಕಿದ್ದಾರೆ ಎಂದು ಬೇರೆಯವರು ತಿಳಿಸಿದ್ದು, ತಾನು ನೋಡಲು ಹೋಗಿರುತ್ತೇನೆ. ತಾನು ನೋಡಿದಾಗ ಆರೋಪಿತರು 50 ತಂತಿ ಕಂಬಗಳನ್ನು ಮುರಿದು ತಂತಿ ಕತ್ತರಿಸಿರುತ್ತಾರೆ. ಅದನ್ನು ಕೇಳಿದಕ್ಕೆ ಆರೋಪಿ 2 ರವರು ಕಡಕತ್ತಿಯನ್ನು ತೆಗೆದು ಹಲ್ಲೆ ಮಾಡಲು ಯತ್ನಿಸಿದಾಗ ಅದು ತನ್ನ ಬೆರಳಿಗೆ ತಾಗಿರುತ್ತದೆ. ಹಿಂದೆಯಿಂದ ಯಾರೋ ದೊಣ್ಣೆಯಿಂದ ಬೆನ್ನಿಗೆ ಹೊಡೆದಿರುತ್ತಾರೆ. ಅಷ್ಟರಲ್ಲಿ ಚಾಸಾ-2 ಮತ್ತು 3 ಬಂದಿರುತ್ತಾರೆ. ಅವರಿಗೂ ಸಹ ಹೊಡೆದಿರುತ್ತಾರೆ, ತಾನು ಪ್ರಜ್ಞೆ ತಪ್ಪಿದ್ದರಿಂದ ಯಾರು ತನಗೆ ಹೊಡೆದಿರುತ್ತಾರೆ ಎಂದು ಗೊತ್ತಾಗಿರುವುದಿಲ್ಲ. ನಂತರ ಚಾಸಾ-2 ರವರು ತನ್ನನ್ನು ಸರಗೂರು ಸರ್ಕಾರಿ ಆಸ್ಪತ್ರೆಗೆ ಸೇರಿಸಿರುತ್ತಾರೆ. ತಾನು ಅದೇ ದಿನ ದೂರು ದಾಖಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುವುದು ಕಂಡುಬಂದಿರುತ್ತದೆ. ಇವರ ಈ ಮುಖ್ಯ ವಿಚಾರಣೆಯ ಅಂಶವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಇವರು ತನ್ನ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಯ ಪ್ರಕರಣದಂತೆ ಸ್ಪಷ್ಟವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬಂದಿರುವುದಿಲ್ಲ. ಇವರು ತನ್ನ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆ ಪ್ರಕರಣದ ಹಲವಾರು ಪ್ರಮುಖ ಅಂಶಗಳನ್ನು ತಿಳಿಸದೇ ಇರುವುದು ಹಾಗೂ ಇನ್ನು ಹಲವಾರು ಅಂಶಗಳನ್ನು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ತಿಳಿಸಿರುವುದು ಕಂಡುಬಂದಿರುತ್ತದೆ. ಪ್ರಥಮವಾಗಿ ಅಭಿಯೋಜನೆಯ ಪ್ರಕರಣದಂತೆ ಸದರಿ ಘಟನೆಯು ದಿನಾಂಕ 30.06.2022 ರಂದು

ಮಧ್ಯಾಹ್ನ 12 ಗಂಟೆಗೆ ನಡೆದಿರುವುದಾಗಿ ತಿಳಿಸಿದ್ದು, ಆದರೇ ಚಾಸಾ–1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಸದರಿ ದಿನದಂದು ಮಧ್ಯಾಹ್ನ 11 ಗಂಟೆ ಸಮಯದಲ್ಲಿ ತಾನು ಮನೆಯಲ್ಲಿ ಇದ್ದಾಗ ಜಮೀನಿನಲ್ಲಿ ಬೇಲಿ ಕಿತ್ತು ಹಾಕಿದ್ದಾರೆ ಎಂದು ಬೇರೆಯವರು ತಿಳಿಸಿರುವುದು ಕಂಡುಬಂದಿರುತ್ತದೆ. ಇನ್ನು ಚಾಸಾ-1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ 2 ನೇ ಆರೋಪಿ ತನಗೆ ಕಡುಕತ್ತಿಯಿಂದ ಹಲ್ಲೆ ಮಾಡಲು ಯತ್ನಿಸಿದಾಗ ಅದು ಬೆರಳಿಗೆ ತಾಗಿ ಗಾಯವಾಗಿರುವುದಾಗಿ ತಿಳಿಸಿರುವುದು ಕಂಡುಬಂದಿರುತ್ತದೆ. ಆದರೆ ಅಭಿಯೋಜನೆಯ ಪ್ರಕರಣವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, 1 ನೇ ಆರೋಪಿಯು ಮಚ್ಚಿನಿಂದ ಚಾಸಾ-1 ರವರ ತಲೆಗೆ ಹೊಡೆಯಲು ಹೋದಾಗ ಚಾಸಾ-1 ರವರು ತನ್ನ ಕೈಯನ್ನು ಅಡ್ಡ ಹಿಡಿದುಕೊಂಡಾಗ ಅವರ ಕೈಗೆ ಗಾಯವಾಗಿರುವುದು ಕಂಡುಬಂದಿರುತ್ತದೆ. ಆದರೆ ಇಲ್ಲಿ ಚಾಸಾ-1 ರವರು 1 ನೇ ಆರೋಪಿ ತನಗೆ ಆ ರೀತಿ ಕಡುಕತ್ತಿ ಅಥವಾ ಮಚ್ಚಿನಿಂದ ಹಲ್ಲೆ ಮಾಡಿರುವ ವಿಚಾರವನ್ನು ತಿಳಿಸಿರುವುದು ಕಂಡುಬಂದಿರುವುದಿಲ್ಲ. ಇನ್ನು ಅಭಿಯೋಜನೆ ಪ್ರಕರಣದಂತೆ 2 ನೇ ಆರೋಪಿ ಚಾಸಾ–2 ರವರಿಗೆ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎಂಬುದಾಗಿರುತ್ತದೆ. ಆದರೆ ಚಾಸಾ–1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಆ ರೀತಿ 2 ನೇ ಆರೋಪಿ ಚಾಸಾ–2 ರವರಿಗೆ ದೊಣ್ಣೆಯಿಂದ ಹಲ್ಲೆ ಮಾಡಿರುವ ವಿಚಾರವನ್ನು ಎಲ್ಲಿಯೂ ಕೂಡ ತಿಳಿಸಿರುವುದು ಕಂಡುಬಂದಿರುವುದಿಲ್ಲ. ಬದಲಾಗಿ ಹಿಂದೆಯಿಂದ ಯಾರೋ ತನ್ನ ಬೆನ್ನಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ ಎಂದು ತಿಳಿಸಿರುವುದು ಕಂಡುಬಂದಿರುತ್ತದೆ. ಆದರೆ ಅಭಿಯೋಜನೆ ಪ್ರಕರಣದಂತೆ ಚಾಸಾ–1 ರವರಿಗೆ 1 ನೇ ಆರೋಪಿ ಕಡುಕತ್ತಿಯಿಂದ ಹಲ್ಲೆ ಮಾಡಿರುವುದು ಕಂಡುಬಂದಿದ್ದು, ಇನ್ನು ಯಾವುದೇ ಆರೋಪಿಗಳು ದೊಣ್ಣೆಯಿಂದ ಹಲ್ಲೆ ಮಾಡಿರುವುದು ಕಂಡುಬಂದಿರುವುದಿಲ್ಲ. ಸದರಿ ಅಂಶವನ್ನು ಚಾಸಾ–1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಹೆಚ್ಚುವರಿಯಾಗಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ತಿಳಿಸಿರುವುದು ಕಂಡುಬಂದಿರುತ್ತದೆ.

21. ಇನ್ನು ಅಭಿಯೋಜನೆ ಪ್ರಕರಣದಂತೆ 3 ಹಾಗೂ 4 ನೇ ಆರೋಪಿಗಳು ಇವರುಗಳನ್ನು ಬಿಡಬೇಡಿ ಕೊಲೆ ಮಾಡಿ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂಬುವುದಾಗಿದ್ದು ಹಾಗೂ 5 ನೇ ಆರೋಪಿ ಚಾಸಾ-1 ಹಾಗೂ 2 ರವರಿಗೆ ಹೊಡೆಯಿರಿ ಎಂದು ಇತರೆ ಆರೋಪಿಗಳಿಗೆ ಕುಮ್ಮಕ್ಕು ನೀಡಿರುತ್ತಾರೆ ಎಂಬುವುದಾಗಿರುತ್ತದೆ. ಆದರೆ ಚಾಸಾ-1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಆ ರೀತಿ 3 ಹಾಗೂ 4 ನೇ ಆರೋಪಿಗಳು ಕೊಲೆ ಬೆದರಿಕೆ ಹಾಕಿರುವ ವಿಚಾರವನ್ನಾಗಲೀ ಅಥವಾ 5 ನೇ ಆರೋಪಿ ಅಲ್ಲಿ ಇದ್ದು ಇತರೆ ಆರೋಪಿಗಳಿಗೆ ಕುಮ್ಮಕ್ಕು ನೀಡಿರುವ ವಿಚಾರದ ಬಗ್ಗೆ ತಿಳಿಸಿರುವುದು ಸಹ ಕಂಡುಬಂದಿರುವುದಿಲ್ಲ. ಇನ್ನು ಚಾಸಾ-1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿಗಳು 50 ತಂತಿ ಕಂಬಗಳನ್ನು ಮುರಿದು ತಂತಿ ಕತ್ತರಿಸಿರುತ್ತಾರೆ ಎಂಬುದಷ್ಟನ್ನೇ ತಿಳಿಸಿದ್ದು ಅವರುಗಳು ಆ ರೀತಿ ತಂತಿ ಕಂಬಗಳನ್ನು ಕಿತ್ತು ಹಾಕಿ ಎಷ್ಟು ನಷ್ಟ ಉಂಟು ಮಾಡಿರುತ್ತಾರೆ ಎಂಬ ವಿಚಾರವನ್ನು ಕೂಡ ಸ್ಪಷ್ಟವಾಗಿ ತಿಳಿಸಿರುವುದಿಲ್ಲ. ಅಭಿಯೋಜನೆಯ ಪ್ರಕರಣದಂತೆ ಆರೋಪಿಗಳು ಆ ರೀತಿ ಕಲ್ಲುಕಂಬಗಳನ್ನು ಮುರಿದು ಚಾಸಾ-1 ಹಾಗೂ 2 ರವರಿಗೆ ಸುಮಾರು 30 ಸಾವಿರದಷ್ಟು ನಷ್ಟ ಉಂಟು ಮಾಡಿರುತ್ತಾರೆ ಎಂಬುದಾಗಿದ್ದು ಆದರೇ ಚಾಸಾ-1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಸದರಿ ಅಂಶವನ್ನು ಸ್ಪಷ್ಟವಾಗಿ ತಿಳಿಸಿರುವುದಿಲ್ಲ. ಇವು ಅಭಿಯೋಜನೆ ಪ್ರಕರಣದ ನೈಜಕಥೆಯ ಬಗ್ಗೆ ಹಾಗೂ ಅಭಿಯೋಜನೆಯಲ್ಲಿ ತಿಳಿಸಿರುವಂತೆ ಆರೋಪಿಗಳು ಕೃತ್ಯ ಎಸಗಿರುವುದರ ಬಗ್ಗೆ ಸಂಪೂರ್ಣ ಅನುಮಾನವನ್ನು ಮೂಡಿಸುತ್ತದೆ.

22. ಇನ್ನು ಇವರನ್ನು ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ಅವರು ತನ್ನ ಪಾಟೀಸವಾಲಿನಲ್ಲಿ ಕಲ್ಲು ಮುರಿದಿರುವ ಬಗ್ಗೆ ಛಾಯಾಚಿತ್ರಗಳನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ ಎಂದು ಉತ್ತರಿಸಿರುವುದು ಕಂಡುಬಂದಿದ್ದು, ಆದರೇ ಈ ಪ್ರಕರಣದಲ್ಲಿ ಪೊಲೀಸರು ಅಂತಹ ಯಾವುದೇ ಫೋಟೋಗಳನ್ನು ಹಾಜರುಪಡಿಸಿರುವ ಬಗ್ಗೆ ಕಂಡುಬಂದಿರುವುದಿಲ್ಲ. ಇನ್ನು ಇವರು ತನ್ನ ಪಾಟೀಸವಾಲಿನಲ್ಲಿ ಮುಂದುವರೆದು ತನಗೆ ಯಾರು ಹಲ್ಲೆ ಮಾಡಿರುತ್ತಾರೆ ಎಂದು ವೈದ್ಯರ

ಮುಂದೆ ಹೇಳಿರುತ್ತೇನೆ. ಆಸ್ಪತ್ರೆಯಲ್ಲಿ ತನಗೆ ಪ್ರಜ್ಞೆ ಇರಲಿಲ್ಲ, 2 ದಿನಗಳ ಕಾಲ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಚಾಸಾ–2 ರವರಿಗೆ ಹೊಡೆದಿರುತ್ತಾರೆ ಎಂದು ದೂರಿನಲ್ಲಿ ಹೇಳಿರುತ್ತೇನೆ ಎಂದು ಉತ್ತರಿಸಿರುವುದು ಕಂಡುಬಂದಿರುತ್ತದೆ. ಇವರ ಈ ಪಾಟೀಸವಾಲಿನ ಉತ್ತರದ ಪ್ರಕಾರ ಇವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಇವರು ಆಸ್ಪತ್ರೆಯಲ್ಲಿ ಘಟನೆ ವಿಚಾರವನ್ನು ವೈದ್ಯರಿಗೆ ತಿಳಿಸಿರುವುದು ಕಂಡುಬಂದಿದ್ದು ಹಾಗೂ ಇವರು ಆಸ್ಪತ್ರೆಯಲ್ಲಿ ಸುಮಾರು 2 ದಿನಗಳವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವುದು ಕಂಡುಬಂದಿರುತ್ತದೆ. ಆದರೇ ಈ ಪ್ರಕರಣದಲ್ಲಿ ಆಸ್ಪತ್ರೆಯಿಂದ ಪೊಲೀಸರಿಗೆ ಘಟನೆ ಬಗ್ಗೆ ಮಾಹಿತಿ ಹೋಗಿರುವ ಬಗ್ಗೆಯಾಗಲೀ ಹಾಗೂ ಪೊಲೀಸರು ಆಸ್ಪತ್ರೆಗೆ ಬಂದು ಚಾಸಾ–1 ಹಾಗೂ 2 ರವರನ್ನು ವಿಚಾರಣೆ ಮಾಡಿ ಹೇಳಿಕೆ ದಾಖಲಿಸಿಕೊಂಡಿರುವ ಬಗ್ಗೆ ಎಲ್ಲಿಯೂ ಸಹ ಸ್ಪಷ್ಟವಾಗಿ ಕಂಡುಬಂದಿರುವುದಿಲ್ಲ. ಒಂದು ಪಕ್ಷದಲ್ಲಿ ಆ ರೀತಿ ಚಾಸಾ–1 ಮತ್ತು 2 ರವರು ಆಸ್ಪತ್ರೆಗೆ ದಾಖಲಾಗಿ ವೈದ್ಯರಿಗೆ ವಿಚಾರವನ್ನು ತಿಳಿಸಿದ್ದಲ್ಲಿ, ಏಕೆ ವೈದ್ಯರು ಸದರಿ ವಿಚಾರವನ್ನು ಪೊಲೀಸರಿಗೆ ತಿಳಿಸಿಲ್ಲ ಎಂಬುವುದರ ಬಗ್ಗೆ ಅಭಿಯೋಜನೆಯ ಪ್ರಕರಣದಲ್ಲಿ ಎಲ್ಲಿಯೂ ಕೂಡ ಸ್ಪಷ್ಟತೆ ಇರುವುದಿಲ್ಲ. ಇನ್ನು ಇವರು ತನ್ನ ಪಾಟಿಸವಾಲಿನಲ್ಲಿ ಮುಂದುವರೆದು ನಿಪಿ–1 ನ್ನು ತನ್ನ ಅಣ್ಣ ಬರೆಸಿರುತ್ತಾರೆ. ನಿಪಿ–1 ರಲ್ಲಿ ಇರುವ ವಿಚಾರ ತನಗೆ ಗೊತ್ತಿಲ್ಲ ಎಂದರೆ ಸರಿ ಎಂದು ಉತ್ತರಿಸಿರುವುದು ಕಂಡುಬಂದಿದ್ದು, ಸದರಿ ಪೊಲೀಸರಿಗೆ ನೀಡಲಾದ ನಿಪಿ–1 ರ ದೂರಿನಲ್ಲಿ ಇರುವ ವಿಚಾರಗಳೇ ತನಗೆ ಗೊತ್ತಿಲ್ಲ ಎಂಬ ಅಂಶವನ್ನು ಚಾಸಾ–1 ರವರು ತನ್ನ ಪಾಟಿಸವಾಲಿನಲ್ಲಿ ನುಡಿದಿದ್ದು ಇದು ಸಹ ಅಭಿಯೋಜನೆಯ ಪ್ರಕರಣದ ನೈಜಕಥೆಯ ಬಗ್ಗೆ ಹಾಗೂ ನಿಪಿ–1 ರಲ್ಲಿರುವ ಅಂಶದ ನೈಜಕಥೆಯ ಬಗ್ಗೆ ಅನುಮಾನವನ್ನು ಮೂಡಿಸುತ್ತದೆ. ಇನ್ನು ಇವರು ತನ್ನ ಪಾಟಿಸವಾಲಿನಲ್ಲಿ ಮುಂದುವರೆದು ಆರೋಪಿಗಳು ತನ್ನ ವಿರುದ್ಧವು ಸಹ ದೂರು ದಾಖಲಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ ಅಸಲು ದಾವೆ ಸಂಖ್ಯೆ: 188/22 ರಂತೆ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ತಾತ್ಕಾಲಿಕ ತಡೆ ಆಜ್ಞೆ ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ ಎಂದು ಉತ್ತರಿಸಿರುವುದು ಕಂಡುಬಂದಿರುತ್ತದೆ. ಇವರ ಈ

ಪಾಟಿಸವಾಲಿನ ಉತ್ತರವನ್ನು ಗಮನಿಸಿದಾಗ ಆರೋಪಿಗಳಿಗೂ ಹಾಗೂ ಚಾಸಾ–1 ಹಾಗೂ 2 ರವರಿಗೆ ಜಮೀನಿನ ವಿಚಾರದಲ್ಲಿ ವೈಮನಸ್ಸು ಇದ್ದು ಇವರುಗಳ ನಡುವೆ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳು ಸಹ ದಾಖಲಾಗಿರುವುದು ಕಂಡುಬಂದಿದ್ದು, ಇದು ನಿಜವಾಗಿಯೂ ಅಭಿಯೋಜನೆಯಲ್ಲಿ ತಿಳಿಸಿರುವಂತೆ ಆರೋಪಿಗಳು ಕೃತ್ಯವೆಸಗಿದ್ದಾರೆಯೇ ಅಥವಾ ಆ ರೀತಿ ಜಮೀನಿನ ವಿಚಾರದಲ್ಲಿ ಇದ್ದ ವೈಷಮ್ಯದ ಹಿನ್ನೆಲೆಯಲ್ಲಿ ಚಾಸಾ–1 ರವರು ಆರೋಪಿಗಳ ವಿರುದ್ಧ ನಿಪಿ–1 ರಂತೆ ದೂರನ್ನು ನೀಡಿದ್ದಾರೆಯೇ ಎಂಬುವುದು ಕೂಡ ಅನುಮಾನಕ್ಕೆ ಎಡೆಮಾಡಿಕೊಡುತ್ತದೆ. ಹೀಗೆ ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಅಭಿಯೋಜನೆಯ ಪ್ರಕರಣದ ಪ್ರಮುಖ ಸಾಕ್ಷಿದಾರರು, ಪಿರ್ಯಾದುದಾರರು ಹಾಗೂ ಗಾಯಾಳು ಆದಂತಹ ಚಾಸಾ–1 ರವರ ಸಾಕ್ಷ್ಯದಲ್ಲಿ ಹಲವಾರು ವ್ಯತಿರಿಕ್ತತೆಗಳಿದ್ದು, ಅವು ಅಭಿಯೋಜನೆಯ ಪ್ರಕರಣವನ್ನು ರುಜುವಾತು ಪಡಿಸುವಲ್ಲಿ ಯಾವುದೇ ರೀತಿಯಲ್ಲಿ ಸಹಕಾರಿಯಾಗಿರುವುದು ಕಂಡುಬಂದಿರುವುದಿಲ್ಲ.

23. ಇನ್ನು ಈ ಪ್ರಕರಣದ ಇನ್ನೊಬ್ಬ ಪ್ರಮುಖ ಸಾಕ್ಷೀದಾರರು ಹಾಗೂ ಗಾಯಾಳು ಅದಂತಹ ಚಾಸಾ–2 ರವರು ಫ್ರಾಸಾ–2 ಎಂದು ವಿಚಾರಣೆಗೆ ಒಳಪಟ್ಟಿದ್ದು, ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ30.06.2022 ರಲ್ಲಿ ಮಧ್ಯಾಹ್ನ 12.00 ಗಂಟೆಗೆ ತಾನು ಮನೆಯಲ್ಲಿ ಇದ್ದಾಗ ಪಕ್ಕದ ಜಮೀನಿನವರು ನಿಮ್ಮ ಜಮೀನಿನಲ್ಲಿ ಬೇಲಿ ಕಿತ್ತು ಹಾಕಿದ್ದಾರೆ ಎಂದು ತಿಳಿಸಿರುತ್ತಾರೆ. ಆಗ ಚಾಸಾ-1 ರವರು ಮೊದಲು ಹೋಗಿರುತ್ತಾರೆ. ನಂತರ ತಾನು ಹೋಗಿರುತ್ತೇನೆ. ತಾನು ಹೋಗುವಷ್ಟರಲ್ಲಿ ಚಾಸಾ-1 ರವರಿಗೆ ಆರೋಪಿತರು ಎಲ್ಲರೂ ಸೇರಿ ಮಚ್ಚು ಹಾಗೂ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ. ಆರೋಪಿ 1 ರಿಂದ 4 ರವರು ತನಗೆ ಹೊಡೆದಿರುತ್ತಾರೆ. ನಂತರ ತನ್ನ ಮಗ ಪ್ರಕಾಶ ಬಂದು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ವಿಚಾರವಾಗಿ ತಾನು ಹೇಳಿಕೆ ಕೊಟ್ಟಿರುತ್ತೇನೆ. ನಂತರ ಅದೇ ದಿನ ಪೊಲೀಸರು ಸ್ಥಳ ಮಹಜರ ಜರುಗಿಸಿರುತ್ತಾರೆ. ಚಾಸಾ-4 ಮತ್ತು 5 ರವರು ಸದರಿ ಮಹಜರ್ ಗೆ ಸಹಿ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುವುದು

ಕಂಡುಬಂದಿರುತ್ತದೆ. ಇವರ ಈ ಮುಖ್ಯ ವಿಚಾರಣೆಯ ಅಂಶವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಇವರು ಸಹ ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣ ಪೂರಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬಂದಿರುವುದಿಲ್ಲ. ಇವರು ಸಹ ತನ್ನ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಯ ಪ್ರಕರಣದ ಹಲವಾರು ಅಂಶಗಳನ್ನು ತಿಳಿಸದೇ ಇರುವುದು ಹಾಗೂ ಇನ್ನು ಅಭಿಯೋಜನೆಯ ಪ್ರಕರಣಕ್ಕಿಂತ ಹಲವಾರು ಅಂಶಗಳನ್ನು ವ್ಯತಿರಿಕ್ತವಾಗಿ ತಿಳಿಸಿರುವುದು ಕಂಡುಬಂದಿರುತ್ತದೆ. ಮೇಲೆ ಹೇಳಿದಂತೆ ಅಭಿಯೋಜನೆಯ ಪ್ರಕರಣವೇನೆಂದರೆಃ ದಿನಾಂಕ 30.06.2022 ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಹೊಸಬಿದರಹಳ್ಳಿ ಗ್ರಾಮದ ಸರ್ವೇ ನಂ.4 ರ ಜಮೀನಿನಲ್ಲಿ ಆರೋಪಿಗಳು ಅಕ್ರಮಕೂಟ ಕಟ್ಟಿಕೊಂಡು ಕೈಯಲ್ಲಿ ಮಚ್ಚು, ದೊಣ್ಣೆಯನ್ನು ಹಿಡಿದುಕೊಂಡು ಸಾಕ್ಷಿ–1 ಹಾಗೂ 2 ರವರು ಜಮೀನಿನಲ್ಲಿ ನೆಟ್ಟಿದ್ದ ಕಲ್ಲು ಕಂಬಗಳನ್ನು ಮುರಿದು ಹಾಕಿ ಸುಮಾರು 30 ಸಾವಿರಗಳಷ್ಟು ನಷ್ಟ ಉಂಟು ಮಾಡುತ್ತಿದ್ದಾಗ, ಅದನ್ನು ಕೇಳಲು ಸಾಕ್ಷಿ–1 ರವರು ಹೋದಾಗ 1 ನೇ ಆರೋಪಿ ಸಾಕ್ಷಿ–1 ರವರಿಗೆ ಮಚ್ಚಿನಿಂದ ತಲೆಗೆ ಹೊಡೆಯಲು ಹೋದಾಗ ಸಾಕ್ಷಿ–1 ರವರು ತನ್ನ ಕೈಯನ್ನು ಅಡ್ಡ ಹಿಡಿದುಕೊಂಡಾಗ ಸಾಕ್ಷಿ–1 ರವರ ಕೈಗೆ ಸಣ್ಣ ಪುಟ್ಟ ಗಾಯವಾಗಿದ್ದು, ಆಗ ಜಗಳ ಬಿಡಿಸಲು ಸಾಕ್ಷಿ–2 ರವರು ಬಂದಾಗ 2 ನೇ ಆರೋಪಿ ದೊಣ್ಣೆಯಿಂದ ಸಾಕ್ಷಿ–2 ರವರ ಬಲಪಕ್ಕೆಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತಾರೆ ಹಾಗೂ 3 ಮತ್ತು 4 ನೇ ಆರೋಪಿಗಳು ಅವರುಗಳನ್ನು ಬಿಡಬೇಡಿ ಕೊಲೆ ಮಾಡಿ ಎಂದು ಕೊಲೆ ಬೆದರಿಕೆ ಹಾಕಿದ್ದು, ಆಗ 5 ನೇ ಆರೋಪಿ ಸಾಕ್ಷಿ–1 ಮತ್ತು 2 ರವರುಗಳಿಗೆ ಹೊಡೆಯುವಂತೆ ಇತರೆ ಆರೋಪಿಗಳಿಗೆ ಕುಮ್ಮಕ್ಕು ನೀಡಿರುತ್ತಾರೆ ಎಂಬುದಾಗಿರುತ್ತದೆ. ಆದರೇ ಚಾಸಾ–2 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಸದರಿ ಅಂಶವನ್ನು ಸ್ಪಷ್ಟವಾಗಿ ತಿಳಿಸಿರುವುದು ಕಂಡುಬಂದಿರುವುದಿಲ್ಲ. ಇವರು ತನ್ನ ಮುಖ್ಯ ವಿಚಾರಣೆಯಲ್ಲಿ ದಿಃ30.06.2022 ರಲ್ಲಿ ಮಧ್ಯಾಹ್ನ 12.00 ಗಂಟೆಗೆ ತಾನು ಮನೆಯಲ್ಲಿ ಇದ್ದಾಗ ಪಕ್ಕದ ಜಮೀನಿನವರು ನಿಮ್ಮ ಜಮೀನಿನಲ್ಲಿ ಬೇಲಿ ಕಿತ್ತು ಹಾಕಿದ್ದಾರೆ ಎಂದು ತಿಳಿಸಿರುತ್ತಾರೆ. ಆಗ ಚಾಸಾ-1 ರವರು ಮೊದಲು ಹೋಗಿರುತ್ತಾರೆ. ನಂತರ ತಾನು

ಹೋಗಿರುತ್ತೇನೆ. ತಾನು ಹೋಗುವಷ್ಟರಲ್ಲಿ ಚಾಸಾ-1 ರವರಿಗೆ ಆರೋಪಿತರು ಎಲ್ಲರೂ ಸೇರಿ ಮಚ್ಚು ಹಾಗೂ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ನುಡಿದಿರುವುದು ಕಂಡುಬಂದಿರುತ್ತದೆ. ಆದರೇ ಅಭಿಯೋಜನೆಯ ಪ್ರಕರಣದಂತೆ ಹಾಗೂ ಚಾಸಾ-2 ರವರು ಪೊಲೀಸರ ಮುಂದೆ ನೀಡಿದ್ದರೂ ಎಂದು ಹೇಳಲಾದ ಹೇಳಿಕೆಯ ಪ್ರಕಾರ ಆರೋಪಿಗಳು ಇವರ ಜಮೀನಿಗೆ ಅಕ್ರಮ ಪ್ರವೇಶಿಸಿ ಬೇಲಿ ಕಿತ್ತು ಹಾಕಿರುವ ವಿಚಾರವನ್ನು ಇವರ ಸೋದರನಾದ ಚಾಸಾ-3 ರವರು ತಿಳಿಸಿದ್ದು ಆ ಪ್ರಕಾರ ಚಾಸಾ-1 ಹಾಗೂ 2 ರವರು ಜೊತೆಯಾಗಿ ಸ್ಥಳಕ್ಕೆ ಹೋಗಿದ್ದು ಆ ಸಮಯದಲ್ಲಿ ಅಲ್ಲಿ ಆರೋಪಿಗಳು ಚಾಸಾ-1 ಮತ್ತು 2 ರವರ ಮೇಲೆ ಗಲಾಟೆ ಮಾಡಿ ಹಲ್ಲೆ ಮಾಡಿರುತ್ತಾರೆ ಎಂಬುವುದಾಗಿರುತ್ತದೆ. ಆದರೆ ಚಾಸಾ-2 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಪಕ್ಕದ ಜಮೀನಿನವರು ತಿಳಿಸಿದ ನಂತರ ತನ್ನ ಸೋದರನಾದ ಚಾಸಾ-1 ರವರು ಮೊದಲು ಸ್ಥಳಕ್ಕೆ ಹೋಗಿದ್ದು ತಾನು ಹೋಗುವಷ್ಟರಲ್ಲಿ ಚಾಸಾ-1 ರವರಿಗೆ ಆರೋಪಿತರೆಲ್ಲರೂ ಸೇರಿ ಮಚ್ಚು ಹಾಗೂ ದೊಣ್ಣೆಯಿಂದ ಹಲ್ಲೆ ಮಾಡಿರುವುದಾಗಿ ತಿಳಿಸಿದ್ದು, ಇದು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿದ್ದು ಅಭಿಯೋಜನೆಯ ಪ್ರಕರಣದ ನೈಜಕಥೆಯ ಬಗ್ಗೆ ಅನುಮಾನವನ್ನು ಮೂಡಿಸುವಂತೆ ಮಾಡುತ್ತದೆ. ಅಭಿಯೋಜನೆಯ ಪ್ರಕರಣದಂತೆ ಸಂಪೂರ್ಣ ಗಲಾಟೆ ನಡೆದ ಸಮಯದಲ್ಲಿ ಚಾಸಾ-2 ರವರು ಸಹ ಅಲ್ಲಿಯೇ ಇದ್ದು ಚಾಸಾ-1 ರವರು ಆರೋಪಿಗಳನ್ನು ಪ್ರಶ್ನಿಸಿದಾಗ 1 ನೇ ಆರೋಪಿ ಮಚ್ಚಿನಿಂದ ಚಾಸಾ-1 ರವರಿಗೆ ತಲೆಗೆ ಹೊಡೆಯಲು ಹೋದಾಗ ಚಾಸಾ-1 ರವರು ತನ್ನ ಕೈಯನ್ನು ಅಡ್ಡ ಹಿಡಿದಾಗ ಸದರಿ ಮಚ್ಚಿನ ಏಟು ಚಾಸಾ-1 ರವರಿಗೆ ಬಿದ್ದು ಸಣ್ಣ ಪುಟ್ಟ ಗಾಯಗಳಾಗಿದ್ದು, ಆಗ ಚಾಸಾ-2 ರವರು ಬಿಡಿಸಲು ಹೋದಾಗ 2 ನೇ ಆರೋಪಿಯು ದೊಣ್ಣೆಯಿಂದ ಚಾಸಾ-2 ರವರ ಬಲಪಕ್ಕೆಗೆ ಹಲ್ಲೆ ಮಾಡಿರುತ್ತಾರೆ ಎಂಬುದಾಗಿರುತ್ತದೆ. ಆದರೇ ಚಾಸಾ-2 ರವರು ಸದರಿ ಅಂಶವನ್ನು ತನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವುದಿಲ್ಲ.

24. ಇನ್ನು ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಮಚ್ಚು ಹಾಗೂ ದೊಣ್ಣೆಯಿಂದ ಚಾಸಾ-1 ರವರಿಗೆ ಹಲ್ಲೆ ಮಾಡಿರುವುದಾಗಿ ತಿಳಿಸಿದ್ದು, ಆದರೇ ಅಭಿಯೋಜನೆಯ

ಪ್ರಕರಣದಂತೆ 1 ನೇ ಆರೋಪಿ ಮಾತ್ರ ಚಾಸಾ-1 ರವರಿಗೆ ಮಚ್ಚಿನಿಂದ ಹಲ್ಲೆ ಮಾಡಿದ್ದು ಉಳಿದ ಆರೋಪಿಗಳು ಯಾವುದೇ ಹಲ್ಲೆ ಮಾಡಿರುವುದು ಕಂಡುಬಂದಿರುವುದಿಲ್ಲ ಹಾಗೂ ದೊಣ್ಣೆಯಿಂದ ಯಾವುದೇ ಆರೋಪಿಗಳು ಚಾಸಾ-1 ರವರಿಗೆ ಹಲ್ಲೆ ಮಾಡಿರುವುದು ಕಂಡುಬಂದಿರುವುದಿಲ್ಲ ಬದಲಾಗಿ 2 ನೇ ಆರೋಪಿಯು ದೊಣ್ಣೆಯಿಂದ ಚಾಸಾ-2 ರವರಿಗೆ ಮಾತ್ರ ಹಲ್ಲೆ ಮಾಡಿರುವುದು ಕಂಡುಬಂದಿರುತ್ತದೆ. ಇನ್ನು ಇವರು ತನ್ನ ಮುಖ್ಯ ವಿಚಾರಣೆಯಲ್ಲಿ 1 ರಿಂದ 4 ನೇ ಆರೋಪಿಗಳು ತನಗೆ ಹೊಡೆದಿರುತ್ತಾರೆ ಎಂದು ತಿಳಿಸಿದ್ದು, ಆದರೇ ಅಭಿಯೋಜನೆಯ ಪ್ರಕರಣದಲ್ಲಿ ಆ ರೀತಿ ಎಲ್ಲಾ ಆರೋಪಿಗಳು ಚಾಸಾ-2 ರವರಿಗೆ ಹಲ್ಲೆ ಮಾಡಿರುವುದು ಕಂಡುಬಂದಿರುವುದಿಲ್ಲ ಬದಲಾಗಿ ಚಾಸಾ-2 ರವರು ಬಿಡಿಸಲು ಹೋದಾಗ 2 ನೇ ಆರೋಪಿಯು ದೊಣ್ಣೆಯಿಂದ ಚಾಸಾ-2 ರವರ ಬಲಪಕ್ಕೆಗೆ ಹಲ್ಲೆ ಮಾಡಿರುವುದು ಕಂಡುಬಂದಿರುತ್ತದೆ. ಇದು ಸಹ ಅಭಿಯೋಜನೆಯ ಪ್ರಕರಣದ ನೈಜಕಥೆಯ ಬಗ್ಗೆ ಹಾಗೂ ಅಭಿಯೋಜನೆಯವರು ತಿಳಿಸಿರುವಂತೆ ಆರೋಪಿಗಳು ಕೃತ್ಯ ಎಸಗಿರುವ ಬಗ್ಗೆ ಅನುಮಾನವನ್ನು ಮೂಡಿಸುತ್ತದೆ. ಇನ್ನು ಚಾಸಾ-1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿಗಳೆಲ್ಲರು ಅಕ್ರಮಕೂಟ ಕಟ್ಟಿಕೊಂಡು ಮಚ್ಚು, ದೊಣ್ಣೆಯನ್ನು ಹಿಡಿದುಕೊಂಡು ದೊಂಬಿ ಮಾಡಿರುವ ವಿಚಾರವನ್ನಾಗಲೀ ಹಾಗೂ 3 ಮತ್ತು 4 ನೇ ಆರೋಪಿಗಳು ಕೊಲೆ ಬೆದರಿಕೆ ಹಾಕಿದ ವಿಚಾರವನ್ನಾಗಲೀ ಹಾಗೂ 5 ನೇ ಆರೋಪಿ ಇತರೆ ಆರೋಪಿಗಳಿಗೆ ಕೃತ್ಯ ಎಸಗುವಂತೆ ಕುಮ್ಮಕ್ಕು ನೀಡಿದ ವಿಚಾರವನ್ನಾಗಲೀ ತನ್ನ ಮುಖ್ಯ ವಿಚಾರಣೆಯಲ್ಲಿ ಎಲ್ಲಿಯೂ ಕೂಡ ತಿಳಿಸಿರುವುದಿಲ್ಲ. ಅಲ್ಲದೇ ಆರೋಪಿಗಳು ಜಮೀನಿಗೆ ಅಕ್ರಮ ಪ್ರವೇಶ ಮಾಡಿ, ಬೇಲಿ ಕಿತ್ತು ಎಷ್ಟು ನಷ್ಟ ಮಾಡಿದ್ದಾರೆ ಎಂಬುವುದನ್ನು ಸಹ ತಿಳಿಸಿರುವುದು ಕಂಡುಬಂದಿರುವುದಿಲ್ಲ. ಇವರ ಈ ಮುಖ್ಯ ವಿಚಾರಣೆಯಲ್ಲಿನ ಅಂಶವನ್ನು ಹಾಗೂ ಅಭಿಯೋಜನೆಯ ಪ್ರಕರಣವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅಭಿಯೋಜನೆಯ ಪ್ರಕರಣಕ್ಕೂ ಇವರ ಸಾಕ್ಷ್ಯಕ್ಕೂ ಹಲವಾರು ರೀತಿಯಲ್ಲಿ ವ್ಯತಿರಿಕ್ತತೆಗಳಿದ್ದು, ಇದು ಅಭಿಯೋಜನೆಯ ಪ್ರಕರಣವನ್ನು ಸಂಪೂರ್ಣ ಅನುಮಾನದಿಂದ ನೋಡುವಂತೆ ಮಾಡುತ್ತದೆ. ಇನ್ನು

ಚಾಸಾ-2 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಪೊಲೀಸರು ಅದೇ ದಿನ ಮಹಜರ್ ಜರುಗಿಸಿರುತ್ತಾರೆ. ಚಾಸಾ-4 ಮತ್ತು 5 ರವರು ಸದರಿ ಮಹಜರ್ ಗೆ ಸಹಿ ಮಾಡಿರುತ್ತಾರೆ ಎಂದು ನುಡಿದಿರುವುದು ಕಂಡುಬಂದಿರುತ್ತದೆ. ಇವರ ಈ ಮುಖ್ಯ ವಿಚಾರಣೆಯ ಅಂಶವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇವರು ಅಭಿಯೋಜನೆಯ ಪ್ರಕರಣದಂತೆ ಸದರಿ ಕೃತ್ಯ ಸ್ಥಳದ ಮಹಜರ್ ಕ್ರಮ ಜರುಗಿಸಿರುವ ಬಗ್ಗೆ ಸ್ಪಷ್ಟವಾಗಿ ತಿಳಿಸಿರುವುದು ಕಂಡುಬಂದಿರುವುದಿಲ್ಲ. ಅಭಿಯೋಜನೆಯ ಪ್ರಕರಣದಂತೆ ಸದರಿ ದಿನದಂದು ಚಾಸಾ-1 ರವರು ಪೊಲೀಸರಿಗೆ ನಿಪಿ-1 ರಂತೆ ದೂರು ನೀಡಿದ ನಂತರ ಸಂಜೆ ಪೊಲೀಸರು ಕೃತ್ಯ ಸ್ಥಳಕ್ಕೆ ಬಂದಿದ್ದು ಅಲ್ಲಿ ಚಾಸಾ-2 ರವರು ಇದ್ದು ಪೊಲೀಸರಿಗೆ ಕೃತ್ಯ ಸ್ಥಳವನ್ನು ತೋರಿಸಿಕೊಟ್ಟು ಆರೋಪಿಗಳು ಕೃತ್ಯಕ್ಕೆ ಬಳಸಿದ ದೊಣ್ಣೆ ಹಾಗೂ ಮಚ್ಚನ್ನು ಹಾಗೂ ಆರೋಪಿಗಳು ಕೃತ್ಯದ ಸಮಯದಲ್ಲಿ ಒಡೆದು ಹಾಕಿದ್ದ ಕಲ್ಲುಕಂಬದ ತುಂಡನ್ನು ಹಾಜರುಪಡಿಸಿದ ಮೇರೆಗೆ ಪೊಲೀಸರು ಚಾಸಾ-2, ಚಾಸಾ-4 ಮತ್ತು 5 ರವರ ಸಮಕ್ಷಮ ನಿಪಿ-2 ರಂತೆ ಮಹಜರ್ ಕ್ರಮ ಜರುಗಿಸಿ ಸದರಿ ಮಚ್ಚು, ದೊಣ್ಣೆ ಹಾಗೂ ಕಲ್ಲಿನ ತುಂಡನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂಬುದಾಗಿರುತ್ತದೆ. ಆದರೇ ಚಾಸಾ-2 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಸದರಿ ಎಲ್ಲಾ ಅಂಶಗಳನ್ನು ಸ್ಪಷ್ಟವಾಗಿ ತಿಳಿಸಿರುವುದಿಲ್ಲ ಬದಲಾಗಿ ಅದೇ ದಿನ ಪೊಲೀಸರು ಮಹಜರ್ ಜರುಗಿಸಿರುತ್ತಾರೆ. ಚಾಸಾ-4 ಮತ್ತು 5 ರವರು ಸದರಿ ಮಹಜರ್ ಗೆ ಸಹಿ ಮಾಡಿರುತ್ತಾರೆ ಎಂಬುದಷ್ಟನ್ನೇ ತಿಳಿಸಿರುವುದು ಕಂಡುಬಂದಿರುತ್ತದೆ. ಇದು ಸಹ ಅಭಿಯೋಜನೆಯ ಪ್ರಕರಣದ ನೈಜಕಥೆಯ ಬಗ್ಗೆ ಹಾಗೂ ಅಭಿಯೋಜನೆಯ ಪ್ರಕರಣದಂತೆ ಪೊಲೀಸರು ಚಾಸಾ-2, ಚಾಸಾ-4 ಹಾಗೂ 5 ರವರ ಸಮಕ್ಷಮ ನಿಪಿ-2 ರಂತೆ ಮಹಜರ್ ಕ್ರಮ ಜರುಗಿಸಿ ಮುದ್ದೆಮಾಲು-1 ರಿಂದ 3 ನ್ನು ಅಮಾನತ್ತು ಪಡಿಸಿಕೊಂಡಿರುವ ಬಗ್ಗೆ ಅನುಮಾನ ಮೂಡಿಸುತ್ತದೆ.

25. ಇನ್ನು ಇವರನ್ನು ಆರೋಪಿಗಳ ಪರ ವಕೀಲರು ಪಾಟಿಸವಾಲಿಗೆ ಒಳಪಡಿಸಿದ್ದು ಅವರು ತನ್ನ ಪಾಟಿಸವಾಲಿನಲ್ಲಿ ತಾನು ಹೋದಾಗ ಚಾಸಾ-1 ರವರನ್ನು ಹೊಡೆಯುತ್ತಿದ್ದರು. 2 ಗಂಟೆಗೆ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ 3 ದಿನ ಇರುತ್ತೇನೆ ಎಂದು ಉತ್ತರಿಸಿರುವುದು

ಕಂಡುಬಂದಿರುತ್ತದೆ. ಇವರ ಈ ಪಾಟಿಸವಾಲಿನ ಉತ್ತರವನ್ನು ಗಮನಿಸಿದಾಗ ಅಭಿಯೋಜನೆಯ ಪ್ರಕರಣದಂತೆ ಹಾಗೂ ಇವರು ಪೊಲೀಸರ ಮುಂದೆ ನೀಡಿದ್ದರೆಂದು ಹೇಳಲಾದ ಹೇಳಿಕೆಯಂತೆ ಇವರು ಹಾಗೂ ಚಾಸಾ-1 ರವರು ಕೃತ್ಯ ಸ್ಥಳಕ್ಕೆ ಜೊತೆಯಾಗಿ ಹೋಗಿರುವುದು ಕಂಡುಬಂದಿರುವುದಿಲ್ಲ. ಚಾಸಾ-1 ರವರು ಕೃತ್ಯ ಸ್ಥಳಕ್ಕೆ ಹೋದ ನಂತರ ಆರೋಪಿಗಳು ಚಾಸಾ-1 ರವರಿಗೆ ಹಲ್ಲೆ ಮಾಡಿದ ನಂತರ ಇವರು ಸ್ಥಳಕ್ಕೆ ಹೋಗಿರುವುದು ಕಂಡುಬಂದಿರುತ್ತದೆ. ಅಲ್ಲದೇ ಇವರು ತನ್ನ ಪಾಟಿಸವಾಲಿನಲ್ಲಿ ತಾನು 3 ದಿನ ಆಸ್ಪತ್ರೆಯಲ್ಲಿ ಇರುವುದಾಗಿ ತಿಳಿಸಿರುವುದು ಕಂಡುಬಂದಿರುತ್ತದೆ. ಆದರೇ ಅಭಿಯೋಜನೆಯ ಪ್ರಕರಣವನ್ನು ಗಮನಿಸಿದಾಗ ಸದರಿ ಕೃತ್ಯದ ದಿನವೇ ಚಾಸಾ-1 ರವರು ಪೊಲೀಸರಿಗೆ ದೂರನ್ನು ನೀಡಿದ್ದು, ಅದೇ ದಿನ ಸಂಜೆ ಅಂದರೆ ದಿನಾಂಕ 30.06.2022 ರಂದು ಸಾಯಂಕಾಲ 5 ಗಂಟೆಯಿಂದ 6 ಗಂಟೆಯವರೆಗೆ ಚಾಸಾ-2 ರವರು ಪೊಲೀಸರಿಗೆ ಕೃತ್ಯ ಸ್ಥಳ ತೋರಿಸಿಕೊಟ್ಟು ಕೃತ್ಯಕ್ಕೆ ಬಳಸಿದ್ದ ದೊಣ್ಣೆ, ಮಚ್ಚು ಮತ್ತು ಕೃತ್ಯದ ಸಮಯದಲ್ಲಿ ಒಡೆದು ಹಾಕಿದ್ದ ಕಲ್ಲುಕಂಬದ ತುಂಡನ್ನು ಹಾಜರುಪಡಿಸಿದ ಮೇರೆಗೆ ಚಾಸಾ-2, 4 ಮತ್ತು 5 ರವರ ಸಮಕ್ಷಮ ಪೊಲೀಸರು ಕೃತ್ಯ ಸ್ಥಳದಲ್ಲಿ ನಿಪಿ-2 ರಂತೆ ಮಹಜರ್ ಕ್ರಮ ಜರುಗಿಸಿ ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಮಚ್ಚು ಮತ್ತು ದೊಣ್ಣೆಯನ್ನು ಹಾಗೂ ಕೃತ್ಯದ ಸಮಯದಲ್ಲಿ ಒಡೆದು ಹಾಕಿದ್ದ ಕಲ್ಲನ್ನು ಅಮಾನತ್ತು ಪಡಿಸಿಕೊಂಡಿರುವುದು ಕಂಡುಬಂದಿರುತ್ತದೆ. ಆದರೇ ಚಾಸಾ-2 ರವರು ತಿಳಿಸಿರುವಂತೆ ಅವರು 3 ದಿನಗಳವರೆಗೆ ಆಸ್ಪತ್ರೆಯಲ್ಲಿ ಇರುವುದಾಗಿ ತಿಳಿಸಿದ್ದು, ಆ ರೀತಿ ಆಸ್ಪತ್ರೆಯಲ್ಲಿ ಇದ್ದ ಮೇಲೆ ಹೇಗೆ ಅವರು ಕೃತ್ಯ ಸ್ಥಳಕ್ಕೆ ಹೋಗಿ ಕೃತ್ಯ ಸ್ಥಳವನ್ನು ಪೊಲೀಸರಿಗೆ ತೋರಿಸಿ ಮುದ್ದೆಮಾಲುಗಳನ್ನು ತೋರಿಸಿಕೊಟ್ಟಿರುತ್ತಾರೆ ಎನ್ನುವುದು ಸಹ ಅನುಮಾನಕ್ಕೆ ಎಡೆಮಾಡಿಕೊಡುತ್ತದೆ. ಇನ್ನು ಚಾಸಾ-2 ರವರು ತನ್ನ ಪಾಟಿಸವಾಲಿನಲ್ಲಿ ಮುಂದುವರೆದು ಕೃತ್ಯ ನಡೆದ ಸ್ಥಳದ ಫೋಟೋಗಳನ್ನು ಪೊಲೀಸರು ತೆಗೆದಿರುತ್ತಾರೆ. ಮುದ್ದೆಮಾಲುಗಳನ್ನು ಪೊಲೀಸರೇ ತೆಗೆದುಕೊಂಡಿರುತ್ತಾರೆ ಎಂದು ಉತ್ತರಿಸಿರುವುದು ಕಂಡುಬಂದಿರುತ್ತದೆ. ಇವರ ಈ ಉತ್ತರವನ್ನು ಗಮನಿಸಿದಾಗ ಮಹಜರ್ ಸಮಯದಲ್ಲಿ ಪೊಲೀಸರು

ಫೋಟೋಗಳನ್ನು ತೆಗೆದಿರುವುದು ಕಂಡುಬಂದಿದ್ದು, ಆದರೇ ಅಂತಹ ಯಾವುದೇ ಫೋಟೋಗಳನ್ನು ಅಭಿಯೋಜನೆಯ ಪ್ರಕರಣದಲ್ಲಿ ಹಾಜರುಪಡಿಸಿ ಗುರುತಿಸಿಕೊಂಡಿರುವುದು ಕಂಡುಬಂದಿರುವುದಿಲ್ಲ. ಇನ್ನು ಇವರು ತನ್ನ ಪಾಟಿಸವಾಲಿನಲ್ಲಿ ಮುದ್ದೆಮಾಲುಗಳನ್ನು ಪೊಲೀಸರೇ ತೆಗೆದುಕೊಂಡಿರುವುದಾಗಿ ತಿಳಿಸಿದ್ದು ಆದರೇ ಅಭಿಯೋಜನೆಯ ಪ್ರಕರಣದಂತೆ ಹಾಗೂ ನಿಪಿ-2 ರ ಮಹಜರ್ ನ ಪ್ರಕಾರ ಚಾಸಾ-2 ರವರು ಸ್ಥಳದಲ್ಲಿದ್ದು ಅವುಗಳನ್ನು ಪೊಲೀಸರಿಗೆ ಹಾಜರುಪಡಿಸಿದ ಮೇರೆಗೆ ಪೊಲೀಸರು ಮಹಜರ್ ಕ್ರಮ ಜರುಗಿಸಿ ಅವುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂಬುದಾಗಿದ್ದು, ಇಲ್ಲಿ ಚಾಸಾ-2 ರವರು ಪಾಟಿಸವಾಲಿನಲ್ಲಿ ನೀಡಿದ ಉತ್ತರಕ್ಕೂ, ಅಭಿಯೋಜನೆಯ ಪ್ರಕರಣಕ್ಕೂ ಹಾಗೂ ನಿಪಿ-2 ರಲ್ಲಿರುವ ಮಹಜರ್ ನ ಅಂಶಕ್ಕೂ ವ್ಯತಿರಿಕ್ತತೆ ಇರುವುದು ಕಂಡುಬಂದಿರುತ್ತದೆ. ಇವು ಅಭಿಯೋಜನೆ ಪ್ರಕರಣದ ನೈಜಕಥೆಯ ಬಗ್ಗೆ ಅನುಮಾನವನ್ನು ಉಂಟು ಮಾಡುವಂತೆ ಮಾಡುತ್ತದೆ. ಹೀಗೆ ಅಭಿಯೋಜನೆ ಪ್ರಕರಣದ ಪ್ರಮುಖ ಸಾಕ್ಷಿದಾರರು, ಇನ್ನೊಬ್ಬ ಗಾಯಾಳು, ಪ್ರತ್ಯಕ್ಷ ಸಾಕ್ಷಿದಾರರು ಆದಂತಹ ಚಾಸಾ-2 ರವರ ಸಾಕ್ಷ್ಯದಿಂದಲೂ ಸಹ ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತುಪಡಿಸುವಲ್ಲಿ ಸಫಲವಾಗಿರುವುದು ಕಂಡುಬಂದಿರುವುದಿಲ್ಲ.

26. ಇನ್ನು ಈ ಪ್ರಕರಣದ ಇನ್ನೊಬ್ಬ ಪ್ರಮುಖ ಸಾಕ್ಷೀದಾರರು ಹಾಗೂ ಪ್ರತ್ಯಕ್ಷ ಸಾಕ್ಷೀದಾರರು ಆದಂತಹ ಚಾಸಾ–3 ರವರು ಫ್ರಾಸಾ–3 ಎಂದು ವಿಚಾರಣೆಗೆ ಒಳಪಟ್ಟಿರುವುದು ಕಂಡುಬಂದಿರುತ್ತದೆ. ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ಚಾಸಾ 1 ಮತ್ತು 2 ರವರಿಗೂ ಆರೋಪಿತರಿಗೂ 3 ವರ್ಷಗಳ ಹಿಂದೆ ಗಲಾಟೆ ಆಗಿರುತ್ತದೆ. ಆರೋಪಿತರು ಚಾಸಾ 1 ಮತ್ತು 2 ರವರ ಜಮೀನಿನಲ್ಲಿ ಕಲ್ಲು ಕಂಬ ಕೀಳುತ್ತಿದ್ದಾರೆ ಎಂದು ತಾನು ಚಾಸಾ 1 ರವರಿಗೆ ತಿಳಿಸಿರುತ್ತೇನೆ. ಆಗ ಚಾಸಾ 1 ರವರು ಜಮೀನು ಬಳಿ ಹೋಗಿರುತ್ತಾರೆ. ಚಾಸಾ 1 ರವರಿಗೆ ಆರೋಪಿ 1 ಮತ್ತು 2 ರವರು ಮಚ್ಚು ಮತ್ತು ದೊಣ್ಣೆಯಿಂದ ತಲೆಗೆ ಹೊಡೆದಿರುತ್ತಾರೆ. ಸುಮಾರು 50 ತಂತಿ ಕಂಬಗಳನ್ನು ಒಡೆದಿರುತ್ತಾರೆ. ಸದರಿ ವಿಚಾರವಾಗಿ ತಾನು ಹೇಳಿಕೆ ಕೊಟ್ಟಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುವುದು ಕಂಡುಬಂದಿರುತ್ತದೆ. ಇವರ ಸಾಕ್ಷ್ಯವನ್ನು

ಗಮನಿಸಿದಾಗ, ಇವರು ಸಹ ಅಭಿಯೋಜನೆಯ ಪ್ರಕರಣದಂತೆ ಸಾಕ್ಷ್ಯವನ್ನು ನುಡಿಯದೆ ಅಭಿಯೋಜನೆಯ ಪ್ರಕರಣದ ಹಲವಾರು ಅಂಶಗಳನ್ನು ತನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸದೇ ಇರುವುದು ಕಂಡುಬಂದಿದ್ದು, ಅಲ್ಲದೇ ಇವರು ಸದರಿ ಕೃತ್ಯದ ಸಮಯದಲ್ಲಿ ಸ್ಥಳದಲ್ಲಿ ಇದ್ದು ಕೃತ್ಯವನ್ನು ನೋಡಿರುವ ಬಗ್ಗೆ ಸಹ ಸಂಪೂರ್ಣ ಅನುಮಾನವನ್ನು ಮೂಡಿಸುವಂತೆ ಮಾಡುತ್ತದೆ. ಅಭಿಯೋಜನೆಯ ಪ್ರಕರಣದಂತೆ ಹಾಗೂ ಇವರು ಪೊಲೀಸರ ಮುಂದೆ ನೀಡಿದ್ದರು ಎಂದು ಹೇಳಲಾದ ಹೇಳಿಕೆಯ ಪ್ರಕಾರ ದಿನಾಂಕ 30.06.2022 ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಚಾಸಾ-3 ರವರು ತನ್ನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿಗಳೆಲ್ಲರು ಅಕ್ರಮ ಗುಂಪು ಕಟ್ಟಿಕೊಂಡು ಚಾಸಾ-1 ಮತ್ತು 2 ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಕಲ್ಲುಕಂಬಗಳನ್ನು ಮುರಿಯುತ್ತಿದ್ದಾಗ, ಚಾಸಾ-3 ರವರು ಸದರಿ ವಿಚಾರವನ್ನು ಚಾಸಾ-1 ಮತ್ತು 2 ರವರಿಗೆ ತಿಳಿಸಿದಾಗ ಚಾಸಾ-1 ರವರು ಜಮೀನಿಗೆ ಬಂದು ನೋಡಿದಾಗ ಆರೋಪಿಗಳು ಸುಮಾರು 50 ಕಲ್ಲುಕಂಬಗಳನ್ನು ಮುರಿದು ಹಾಕಿ ಸುಮಾರು 30 ಸಾವಿರಗಳಷ್ಟು ನಷ್ಟ ಉಂಟು ಮಾಡಿದ್ದು ಈ ವಿಚಾರವಾಗಿ ಚಾಸಾ-1 ರವರು ಆರೋಪಿಗಳನ್ನು ಪ್ರಶ್ನಿಸಿದಾಗ, 1 ನೇ ಆರೋಪಿಯು ಮಚ್ಚಿನಿಂದ ಚಾಸಾ-1 ರವರ ತಲೆಗೆ ಹೊಡೆಯಲು ಬಂದಾಗ ಆತ ಕೈ ಎತ್ತಿ ತಡೆದಾಗ ಅವನ ಬಲಕೈ ಹಾಗೂ ಹಣೆಗೆ ಸದರಿ ಮಚ್ಚಿನ ಪೆಟ್ಟು ಬಿದ್ದು ಗಾಯವಾಗಿರುತ್ತದೆ, ಆಗ ಚಾಸಾ-2 ರವರು ಗಲಾಟೆ ಬಿಡಿಸಲು ಬಂದಾಗ 2 ನೇ ಆರೋಪಿಯು ಚಾಸಾ-2 ರವರ ಬಲಪಕ್ಕೆಗೆ ಹಲ್ಲೆ ಮಾಡಿರುತ್ತಾರೆ ಹಾಗೂ 3 ಹಾಗೂ 4 ನೇ ಆರೋಪಿಗಳು ಕೊಲೆ ಬೆದರಿಕೆ ಹಾಕಿದ್ದು, 5 ನೇ ಅರೋಪಿಯು ಇತರೆ ಆರೋಪಿಗಳಿಗೆ ಕೃತ್ಯ ಎಸಗುವಂತೆ ಕುಮ್ಮಕ್ಕು ನೀಡಿರುತ್ತಾರೆ ಎಂಬುದಾಗಿದ್ದು, ಸದರಿ ಗಲಾಟೆಯನ್ನು ಅಲ್ಲಿಯೇ ಇದ್ದ ಚಾಸಾ-3 ಹಾಗೂ 4 ರವರು ಬಿಡಿಸಿರುತ್ತಾರೆ ಎಂಬುದಾಗಿರುತ್ತದೆ. ಆದರೇ ಚಾಸಾ-3 ರವರು ಸದರಿ ಎಲ್ಲ ಅಂಶಗಳನ್ನು ತನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವುದು ಕಂಡುಬಂದಿರುವುದಿಲ್ಲ. ಇವರು ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಚಾಸಾ 1 ಮತ್ತು 2 ರವರ

ಜಮೀನಿಗೆ ಅಕ್ರಮ ಪ್ರವೇಶ ಮಾಡಿದ ಬಗ್ಗೆಯಾಗಲೀ ಹಾಗೂ ಮಚ್ಚು, ದೊಣ್ಣೆಯನ್ನು ಹಿಡಿದುಕೊಂಡು ದೊಂಬಿ ಮಾಡಿದ ವಿಚಾರವನ್ನಾಗಲೀ, 1 ನೇ ಆರೋಪಿಯು ಮಚ್ಚಿನಿಂದ ಚಾಸಾ-1 ರವರಿಗೆ ಹಲ್ಲೆ ಮಾಡಿದ ವಿಚಾರವನ್ನಾಗಲೀ ಅಥವಾ 2 ನೇ ಆರೋಪಿಯು ದೊಣ್ಣೆಯಿಂದ ಚಾಸಾ-2 ರವರಿಗೆ ಹಲ್ಲೆ ಮಾಡಿದ ವಿಚಾರವನ್ನಾಗಲೀ ಹಾಗೂ 3 ಮತ್ತು 4 ನೇ ಆರೋಪಿಗಳು ಕೊಲೆ ಬೆದರಿಕೆ ಹಾಕಿದ ವಿಚಾರವನ್ನಾಗಲೀ ಹಾಗೂ 5 ನೇ ಆರೋಪಿ ಇತರೆ ಆರೋಪಿಗಳಿಗೆ ಕೃತ್ಯವನ್ನು ಎಸಗುವಂತೆ ಕುಮ್ಮಕ್ಕು ನೀಡಿದ ವಿಚಾರವನ್ನಾಗಲೀ ತನ್ನ ಮುಖ್ಯ ವಿಚಾರಣೆಯಲ್ಲಿ ಎಲ್ಲಿಯೂ ಕೂಡ ಸ್ಪಷ್ಟವಾಗಿ ತಿಳಿಸಿರುವುದಿಲ್ಲ. ಅಲ್ಲದೇ ಆರೋಪಿಗಳು ತಂತಿ ಬೇಲಿಯನ್ನು ಮುರಿದು ಹಾಕಿ ಚಾಸಾ-1 ಮತ್ತು 2 ರವರಿಗೆ ಸುಮಾರು 30 ಸಾವಿರ ನಷ್ಟ ಉಂಟು ಮಾಡಿರುವ ವಿಚಾರವನ್ನು ತಿಳಿಸಿರುವುದು ಸಹ ಕಂಡುಬಂದಿರುವುದಿಲ್ಲ. ಇದು ಇವರು ಕೃತ್ಯ ಸ್ಥಳದಲ್ಲಿ ಇದ್ದು ಕೃತ್ಯವನ್ನು ನೋಡಿದ ಬಗ್ಗೆ ಸಂಪೂರ್ಣ ಅನುಮಾನವನ್ನು ಮೂಡಿಸುತ್ತದೆ. ಹೀಗೆ ಅಭಿಯೋಜನೆ ಪ್ರಕರಣದ ಪ್ರಮುಖ ಸಾಕ್ಷಿದಾರರು ಮತ್ತು ಪ್ರತ್ಯಕ್ಷ ಸಾಕ್ಷಿದಾರರಾದಂತಹ ಚಾಸಾ-3 ರವರ ಸಾಕ್ಷ್ಯದಿಂದಲೂ ಸಹ ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತುಪಡಿಸುವಲ್ಲಿ ವಿಫಲವಾಗಿರುವುದು ಕಂಡುಬಂದಿರುತ್ತದೆ.

27. ಇನ್ನು ಈ ಪ್ರಕರಣದಲ್ಲಿ ಇನ್ನೊಬ್ಬ ಪ್ರಮುಖ ಸಾಕ್ಷಿದಾರರು, ಪ್ರತ್ಯಕ್ಷ ಸಾಕ್ಷಿದಾರರು ಹಾಗೂ ನಿಪಿ–2 ಕೃತ್ಯ ಸ್ಥಳ ಮತ್ತು ಅಮಾನತ್ತು ಮಹಜರ್ ನ ಸಾಕ್ಷಿದಾರರಾದ ಚಾಸಾ–4 ರವರು ಪ್ರಾಸಾ–4 ಎಂದು ವಿಚಾರಣೆಗೊಳಪಟ್ಟಿದ್ದು, ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ದಿಃ 30.06.2022 ರಂದು 12 ಗಂಟೆ ಸಮಯದಲ್ಲಿ ತಾನು ಹೋದಾಗ ಗಲಾಟೆ ನಡೆಯುತ್ತಿತ್ತು. ತಾನು ಹೋಗುವಷ್ಟರಲ್ಲಿ ಆರೋಪಿತರು ಚಾಸಾ 1 ಮತ್ತು 2 ರವರಿಗೆ ಮಚ್ಚು ಮತ್ತು ದೊಣ್ಣೆಯಿಂದ ಹೊಡೆದಿರುತ್ತಾರೆ. ಸುಮಾರು 50 ಕಂಬಗಳನ್ನು ಆರೋಪಿತರು ಮುರಿದು ಹಾಕಿದ್ದರು. ಚಾಸಾ 1 ರವರ ಬಲ ಕೈಯಲ್ಲಿ ರಕ್ತ ಬರುತ್ತಿತ್ತು, ಚಾಸಾ 2 ರವರ ಭುಜಕ್ಕೆ ಗಾಯ ಆಗಿತ್ತು. ತಾನು ಮತ್ತು ಚಾಸಾ 3 ರವರು ಜಗಳ ಬಿಡಿಸಿ ಸಮಾಧಾನ ಮಾಡಿರುತ್ತೇವೆ. ನಂತರ ಚಾಸಾ 1 ಮತ್ತು 2 ರವರನ್ನು ಕಾರಿನಲ್ಲಿ ಆಸ್ಪತ್ರೆಗೆ

ಕಳುಹಿಸಿರುತ್ತೇವೆ. ಗಲಾಟೆ ನಡೆದ ದಿನವೇ 5 ಗಂಟೆ ಸಮಯದಲ್ಲಿ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ, ನಂತರ ಮಹಜರ ಮಾಡಿ ತನ್ನ ಸಮಕ್ಷಮ ಮುದ್ದೆಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಿಪಿ 2 ಕ್ಕೆ ತಾನು, ಚಾಸಾ 3 ಮತ್ತು 5 ರವರು ಸಹಿ ಮಾಡಿರುತ್ತೇವೆ ಎಂಬುದನಷ್ಟೇ ನುಡಿದಿರುವುದು ಕಂಡುಬಂದಿರುತ್ತದೆ. ಇವರ ಈ ಮುಖ್ಯ ವಿಚಾರಣೆಯ ಅಂಶವನ್ನು ಗಮನಿಸಿದಾಗ ಇವರು ಸಹ ತನ್ನ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಯ ಪ್ರಕರಣದ ಸಂಪೂರ್ಣ ಅಂಶವನ್ನು ಸ್ಪಷ್ಟವಾಗಿ ತನ್ನ ಸಾಕ್ಷ್ಯದಲ್ಲಿ ತಿಳಿಸಿರುವುದು ಕಂಡುಬಂದಿರುವುದಿಲ್ಲ. ಅಭಿಯೋಜನೆ ಪ್ರಕರಣದ ಹಲವಾರು ಅಂಶಗಳನ್ನು ಇವರು ತನ್ನ ಮುಖ್ಯ ವಿಚಾರಣೆಯಲ್ಲಿ ಸ್ಪಷ್ಟವಾಗಿ ತಿಳಿಸದೇ ಹಾಗೂ ಇನ್ನು ಹಲವಾರು ಅಂಶಗಳನ್ನು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ತಿಳಿಸಿರುವುದು ಕಂಡುಬಂದಿರುತ್ತದೆ. ಇದು ಇವರು ಕೃತ್ಯ ಸ್ಥಳದಲ್ಲಿ ಇದ್ದು, ಕೃತ್ಯವನ್ನು ಖುದ್ದಾಗಿ ನೋಡಿದ ಬಗ್ಗೆ ಹಾಗೂ ಆರೋಪಿಗಳು ಅಭಿಯೋಜನೆಯ ಪ್ರಕರಣದಂತೆ ಕೃತ್ಯ ಎಸಗಿರುವ ಬಗ್ಗೆ ಅನುಮಾನವನ್ನು ಮೂಡಿಸುತ್ತದೆ. ಅಭಿಯೋಜನೆಯ ಪ್ರಕರಣದಂತೆ ಹಾಗೂ ಇವರು ಪೊಲೀಸರ ಮುಂದೆ ನೀಡಿದ್ದರು ಎಂದು ಹೇಳಲಾದ ಹೇಳಿಕೆಯ ಪ್ರಕಾರ ದಿನಾಂಕ 30.06.2022 ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಚಾಸಾ–4 ರವರು ತನ್ನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿಗಳೆಲ್ಲರು ಅಕ್ರಮ ಗುಂಪು ಕಟ್ಟಿಕೊಂಡು ಚಾಸಾ-1 ಮತ್ತು 2 ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಕಲ್ಲುಕಂಬಗಳನ್ನು ಮುರಿಯುತ್ತಿದ್ದು, ಆಗ ಚಾಸಾ-3 ರವರು ಸದರಿ ವಿಚಾರವನ್ನು ಚಾಸಾ-1 ಮತ್ತು 2 ರವರಿಗೆ ತಿಳಿಸಿದಾಗ ಚಾಸಾ-1 ರವರು ಜಮೀನಿಗೆ ಬಂದು ನೋಡಿದಾಗ ಆರೋಪಿಗಳು ಸುಮಾರು 50 ಕಲ್ಲುಕಂಬಗಳನ್ನು ಮುರಿದು ಹಾಕಿ ಸುಮಾರು 30 ಸಾವಿರಗಳಷ್ಟು ನಷ್ಟ ಉಂಟು ಮಾಡಿದ್ದು ಈ ವಿಚಾರವಾಗಿ ಚಾಸಾ-1 ರವರು ಆರೋಪಿಗಳನ್ನು ಪ್ರಶ್ನಿಸಿದಾಗ, 1 ನೇ ಆರೋಪಿಯು ಮಚ್ಚಿನಿಂದ ಚಾಸಾ-1 ರವರ ತಲೆಗೆ ಹೊಡೆಯಲು ಬಂದಾಗ ಆತ ಕೈ ಎತ್ತಿ ತಡೆದಾಗ ಅವನ ಬಲಕೈ ಹಾಗೂ ಹಣೆಗೆ ಸದರಿ ಮಚ್ಚಿನ ಪೆಟ್ಟು ಬಿದ್ದು ಗಾಯವಾಗಿರುತ್ತದೆ, ಆಗ ಚಾಸಾ-2 ರವರು ಗಲಾಟೆ ಬಿಡಿಸಲು ಬಂದಾಗ 2 ನೇ ಆರೋಪಿಯು ಚಾಸಾ-2 ರವರ ಬಲಪಕ್ಕೆಗೆ

ಹಲ್ಲೆ ಮಾಡಿರುತ್ತಾರೆ ಹಾಗೂ 3 ಹಾಗೂ 4 ನೇ ಆರೋಪಿಗಳು ಕೊಲೆ ಬೆದರಿಕೆ ಹಾಕಿದ್ದು, 5 ನೇ ಅರೋಪಿಯು ಇತರೆ ಆರೋಪಿಗಳಿಗೆ ಕೃತ್ಯ ಎಸಗುವಂತೆ ಕುಮ್ಮಕ್ಕು ನೀಡಿರುತ್ತಾರೆ ಎಂಬುದಾಗಿದ್ದು, ಸದರಿ ಗಲಾಟೆಯನ್ನು ಅಲ್ಲಿಯೇ ಇದ್ದ ಚಾಸಾ-3 ಹಾಗೂ 4 ರವರು ಬಿಡಿಸಿರುತ್ತಾರೆ ಎಂಬುದಾಗಿರುತ್ತದೆ. ಆದರೇ ಚಾಸಾ-4 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಸದರಿ ಎಲ್ಲಾ ಅಂಶಗಳನ್ನು ತಿಳಿಸಿರುವುದು ಕಂಡುಬಂದಿರುವುದಿಲ್ಲ. ಇವರು ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಚಾಸಾ 1 ಮತ್ತು 2 ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿದ ಬಗ್ಗೆಯಾಗಲೀ ಹಾಗೂ ಮಚ್ಚು, ದೊಣ್ಣೆಯನ್ನು ಹಿಡಿದುಕೊಂಡು ದೊಂಬಿ ಮಾಡಿದ ವಿಚಾರವನ್ನಾಗಲೀ, 1 ನೇ ಆರೋಪಿಯು ಮಚ್ಚಿನಿಂದ ಚಾಸಾ-1 ರವರಿಗೆ ಹಲ್ಲೆ ಮಾಡಿದ ವಿಚಾರವನ್ನಾಗಲೀ ಅಥವಾ 2 ನೇ ಆರೋಪಿಯು ದೊಣ್ಣೆಯಿಂದ ಚಾಸಾ-2 ರವರಿಗೆ ಹಲ್ಲೆ ಮಾಡಿದ ವಿಚಾರವನ್ನಾಗಲೀ ಹಾಗೂ 3 ಮತ್ತು 4 ನೇ ಆರೋಪಿಗಳು ಕೊಲೆ ಬೆದರಿಕೆ ಹಾಕಿದ ವಿಚಾರವನ್ನಾಗಲೀ ಹಾಗೂ 5 ನೇ ಆರೋಪಿ ಇತರೆ ಆರೋಪಿಗಳಿಗೆ ಕೃತ್ಯವನ್ನು ಎಸಗುವಂತೆ ಕುಮ್ಮಕ್ಕು ನೀಡಿದ ವಿಚಾರವನ್ನಾಗಲೀ ತನ್ನ ಮುಖ್ಯ ವಿಚಾರಣೆಯಲ್ಲಿ ಎಲ್ಲಿಯೂ ಕೂಡ ಸ್ಪಷ್ಟವಾಗಿ ತಿಳಿಸಿರುವುದಿಲ್ಲ. ಅಲ್ಲದೇ ಆರೋಪಿಗಳು ತಂತಿ ಬೇಲಿಯನ್ನು ಮುರಿದು ಹಾಕಿ ಚಾಸಾ-1 ಮತ್ತು 2 ರವರಿಗೆ ಸುಮಾರು 30 ಸಾವಿರ ನಷ್ಟ ಉಂಟು ಮಾಡಿರುವ ವಿಚಾರವನ್ನು ತಿಳಿಸಿರುವುದು ಸಹ ಕಂಡುಬಂದಿರುವುದಿಲ್ಲ. ಇದು ಇವರು ಕೃತ್ಯ ಸ್ಥಳದಲ್ಲಿ ಇದ್ದು ಕೃತ್ಯವನ್ನು ನೋಡಿದ ಬಗ್ಗೆ ಸಂಪೂರ್ಣ ಅನುಮಾನವನ್ನು ಮೂಡಿಸುತ್ತದೆ.

28. ಇನ್ನು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು ಗಲಾಟೆ ನಡೆದ ದಿನವೇ 5 ಗಂಟೆ ಸಮಯದಲ್ಲಿ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ನಂತರ ಮಹಜರ್ ಮಾಡಿ ತನ್ನ ಸಮಕ್ಷಮ ಮುದ್ದೆಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುವುದು ಕಂಡುಬಂದಿರುತ್ತದೆ. ಆದರೆ ಅಭಿಯೋಜನೆಯ ಪ್ರಕರಣದಂತೆ ಚಾಸಾ-1 ರವರು ಪೊಲೀಸರಿಗೆ

ದಿನಾಂಕ 30.06.2022 ರಂದು ನಿಪಿ-1 ರಂತೆ ದೂರನ್ನು ನೀಡಿದ ನಂತರ ಅದೇ ದಿನ ಸಂಜೆ 5 ಗಂಟೆಗೆ ಪೊಲೀಸರು ಕೃತ್ಯ ಸ್ಥಳಕ್ಕೆ ಬಂದಿದ್ದು, ಅಲ್ಲಿ ಚಾಸಾ-2 ರವರು ಹಾಜರಿದ್ದು, ಪೊಲೀಸರು ಅಲ್ಲಿಗೆ ಪಂಚರಾದ ಚಾಸಾ-4 ಹಾಗೂ 5 ರವರನ್ನು ಬರಮಾಡಿಕೊಂಡು ಅವರಿಗೆ ವಿಚಾರವನ್ನು ತಿಳಿಸಿ ಮಹಜರ್ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ತಿಳಿಸಿ ಅದಕ್ಕೆ ಅವರು ಒಪ್ಪಿಕೊಂಡ ಮೇರೆಗೆ ಚಾಸಾ-2 ರವರು ಕೃತ್ಯ ಸ್ಥಳವನ್ನು ತೋರಿಸಿ ಆರೋಪಿಗಳು ಕೃತ್ಯಕ್ಕೆ ಬಳಸಿದ ಮಚ್ಚು ಹಾಗೂ ದೊಣ್ಣೆ ಹಾಗೂ ಆರೋಪಿಗಳು ಕೃತ್ಯದ ಸಮಯದಲ್ಲಿ ಒಡೆದು ಹಾಕಿದ್ದ ಕಲ್ಲುಕಂಬದ ತುಂಡನ್ನು ಹಾಜರುಪಡಿಸಿದ ಮೇರೆಗೆ ಪೊಲೀಸರು ಚಾಸಾ-2, 4 ಹಾಗೂ 5 ರವರ ಸಮಕ್ಷಮ ನಿಪಿ-2 ರಂತೆ ಮಹಜರ್ ಕ್ರಮ ಜರುಗಿಸಿ ಸದರಿ ಮುದ್ದೆಮಾಲು-1 ರಿಂದ 3 ನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂಬುದಾಗಿರುತ್ತದೆ. ಆದರೇ ಚಾಸಾ-4 ರವರು ಸದರಿ ಎಲ್ಲ ಅಂಶಗಳನ್ನು ತನ್ನ ಮುಖ್ಯ ವಿಚಾರಣೆಯಲ್ಲಿ ಸ್ಪಷ್ಟವಾಗಿ ತಿಳಿಸಿರುವುದು ಕಂಡುಬಂದಿರುವುದಿಲ್ಲ. ಇದು ಸಹ ಅಭಿಯೋಜನೆಯ ಪ್ರಕರಣದ ನೈಜಕಥೆಯ ಬಗ್ಗೆ ಹಾಗೂ ಅಭಿಯೋಜನೆಯು ತಿಳಿಸಿರುವಂತೆ ಪೊಲೀಸರು ಚಾಸಾ-2, 4 ಮತ್ತು 5 ರವರ ಸಮಕ್ಷಮ ನಿಪಿ-2 ರಂತೆ ಮಹಜರ್ ಕ್ರಮ ಜರುಗಿಸಿ ಮುದ್ದೆಮಾಲು-1 ರಿಂದ 3 ನ್ನು ಅಮಾನತ್ತು ಪಡಿಸಿಕೊಂಡಿರುವ ಬಗ್ಗೆ ಅನುಮಾನವನ್ನು ಮೂಡಿಸುತ್ತದೆ. ಇನ್ನು ಇವರು ತನ್ನ ಪಾಟಿಸವಾಲಿನಲ್ಲಿ ತನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಮಹಜರನಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ ಎಂದರೆ ಸರಿ. ಮುದ್ದೆಮಾಲುಗಳನ್ನು ಪೊಲೀಸರೇ ತೆಗೆದುಕೊಂಡಿರುತ್ತಾರೆ ಎಂದು ಉತ್ತರಿಸಿರುವುದು ಕಂಡುಬಂದಿರುತ್ತದೆ. ಇವರ ಈ ಉತ್ತರವನ್ನು ಗಮನಿಸಿದಾಗ ಇವರು ಸದರಿ ಮಹಜರ್ ನ ಸಮಯದಲ್ಲಿ ಸ್ಥಳದಲ್ಲಿದ್ದು ಅದಕ್ಕೆ ಸಹಿ ಮಾಡಿರುವ ಬಗ್ಗೆ ಇನ್ನು ಅನುಮಾನವನ್ನು ಮೂಡಿಸುತ್ತದೆ. ಹೀಗೆ ಅಭಿಯೋಜನೆ ಪ್ರಕರಣದ ಇನ್ನೊಬ್ಬ ಪ್ರಮುಖ ಸಾಕ್ಷಿದಾರರು, ಪ್ರತ್ಯಕ್ಷ ಸಾಕ್ಷಿದಾರರು ಹಾಗೂ ನಿಪಿ-2 ಮಹಜರಿನ ಸಾಕ್ಷಿದಾರರಾದಂತಹ ಚಾಸಾ-4 ರವರ ಸಾಕ್ಷ್ಯದಿಂದಲೂ ಸಹ ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತುಪಡಿಸುವಲ್ಲಿ ವಿಫಲವಾಗಿರುವುದು ಕಂಡುಬಂದಿರುತ್ತದೆ.

29. ಇನ್ನು ಈ ಪ್ರಕರಣದ ಇನ್ನೊಬ್ಬ ಪ್ರಮುಖ ಸಾಕ್ಷಿದಾರರು ಹಾಗೂ ನಿಪಿ–2 ಮಹಜರ್ ನ ಇನ್ನೊಬ್ಬ ಸಾಕ್ಷಿದಾರರಾದ ಚಾಸಾ–5 ರವರು ಫ್ರಾಸಾ–5 ಎಂದು ವಿಚಾರಣೆಗೊಳಪಟ್ಟಿದ್ದು, ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ನಿಪಿ–2 ರಲ್ಲಿರುವ ಸಹಿಯನ್ನು ತಾನು 3 ವರ್ಷಗಳ ಹಿಂದೆ ಚಾಸಾ 2 ರವರ ಜಮೀನಿನಲ್ಲಿ ಮಾಡಿರುತ್ತೇನೆ. ಚಾಸಾ-1 ಹಾಗೂ ಆರೋಪಿತರಿಗೂ ಗಲಾಟೆ ಆಗಿರುವ ವಿಚಾರವಾಗಿ ತಾನು ಸಹಿ ಮಾಡಿದ್ದು, ನಿಪಿ 2 ಕ್ಕೆ ತಾನು ಮತ್ತು ಚಾಸಾ3 ರವರು ಸಹಿ ಮಾಡಿರುತ್ತೇವೆ. ತನ್ನ ಸಮಕ್ಷಮ ದೊಣ್ಣೆ, ಮಚ್ಚು ಮತ್ತು ಕಲ್ಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುವುದು ಕಂಡುಬಂದಿರುತ್ತದೆ. ಇವರ ಈ ಮುಖ್ಯ ವಿಚಾರಣೆಯ ಅಂಶವನ್ನು ಗಮನಿಸಿದಾಗ ಇವರು ಸಹ ಅಭಿಯೋಜನೆಯ ಪ್ರಕರಣದಂತೆ ನಿಪಿ–2 ರಂತೆ ಮಹಜರ್ ಕ್ರಮ ಜರುಗಿಸಿರುವ ಬಗ್ಗೆ ಸ್ಪಷ್ಟವಾಗಿ ತಿಳಿಸಿರುವುದು ಕಂಡುಬಂದಿರುವುದಿಲ್ಲ. ಅಭಿಯೋಜನೆ ಪ್ರಕರಣದಂತೆ ದಿನಾಂಕ 30.06.2022 ರಂದು ಚಾಸಾ–1 ರವರು ಪೊಲೀಸರಿಗೆ ನಿಪಿ–1 ರಂತೆ ದೂರನ್ನು ನೀಡಿದ ನಂತರ ಅದೇ ದಿನ ಸಂಜೆ ಸುಮಾರು 5 ಗಂಟೆಗೆ ಪೊಲೀಸರು ಕೃತ್ಯ ಸ್ಥಳಕ್ಕೆ ಬಂದು ಅಲ್ಲಿ ಚಾಸಾ-1 ರವರು ಹಾಜರಿದ್ದು, ಪೊಲೀಸರು ಅಲ್ಲಿಗೆ ಪಂಚರಾದ ಚಾಸಾ-4 ಹಾಗೂ 5 ರವರನ್ನು ಬರಮಾಡಿಕೊಂಡು ಅವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ ಮಹಜರ್ ಸಮಯದಲ್ಲಿ ಸಾಕ್ಷಿದಾರರಾಗಿ ಸಹಕರಿಸುವಂತೆ ಕೋರಿಕೊಂಡು ಅದಕ್ಕೆ ಅವರು ಒಪ್ಪಿಕೊಂಡ ಮೇರೆಗೆ ಚಾಸಾ-2 ರವರು ಕೃತ್ಯ ಸ್ಥಳವನ್ನು ತೋರಿಸಿ ಆರೋಪಿಗಳು ಕೃತ್ಯಕ್ಕೆ ಬಳಸಿದ ಮಚ್ಚು, ದೊಣ್ಣೆ ಹಾಗೂ ಕೃತ್ಯದ ಸಮಯದಲ್ಲಿ ಒಡೆದು ಹಾಕಿದ್ದ ಕಲ್ಲಿನ ತುಂಡನ್ನು ಹಾಜರುಪಡಿಸಿದ ಮೇರೆಗೆ ಪೊಲೀಸರು ಸಾಕ್ಷಿ-2, 4 ಹಾಗೂ 5 ರವರ ಸಮಕ್ಷಮ ನಿಪಿ-2 ರಂತೆ ಮಹಜರ್ ಕ್ರಮ ಜರುಗಿಸಿ ಸದರಿ ಮುದ್ದೆಮಾಲು-1 ರಿಂದ 3 ನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂಬುದಾಗಿರುತ್ತದೆ. ಆದರೇ ಚಾಸಾ-5 ರವರು ಸದರಿ ಎಲ್ಲ ಅಂಶಗಳನ್ನು ತನ್ನ ಮುಖ್ಯ ವಿಚಾರಣೆಯಲ್ಲಿ ಸ್ಪಷ್ಟವಾಗಿ ತಿಳಿಸಿರುವುದು ಕಂಡುಬಂದಿರುವುದಿಲ್ಲ. ಇದು ಅಭಿಯೋಜನೆಯ ಪ್ರಕರಣದ ನೈಜಕಥೆಯ ಬಗ್ಗೆ ಹಾಗೂ ಅಭಿಯೋಜನೆಯ ಪ್ರಕರಣದಂತೆ ಪೊಲೀಸರು ಚಾಸಾ-2, 4

ಮತ್ತು 5 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಮುದ್ದೆಮಾಲು-1 ರಿಂದ 3 ನ್ನು ಅಮಾನತ್ತು ಪಡಿಸಿಕೊಂಡಿರುವ ಬಗ್ಗೆ ಅನುಮಾನವನ್ನು ಮೂಡಿಸುತ್ತದೆ. ಹೀಗೆ ಅಭಿಯೋಜನೆ ಪ್ರಕರಣದ ಇನ್ನೊಬ್ಬ ಪ್ರಮುಖ ಸಾಕ್ಷಿದಾರರು ಮತ್ತು ನಿಪಿ-2 ಮಹಜರ್ ನ ಸಾಕ್ಷಿದಾರರು ಆದಂತಹ ಚಾಸಾ-5 ರವರ ಸಾಕ್ಷ್ಯದಿಂದಲೂ ಸಹ ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತುಪಡಿಸುವಲ್ಲಿ ವಿಫಲವಾಗಿರುವುದು ಕಂಡುಬಂದಿರುತ್ತದೆ.

30. ಇನ್ನು ಈ ಪ್ರಕರಣದ ಪ್ರಮುಖ ಸಾಕ್ಷಿದಾರರು ಹಾಗೂ ಚಾಸಾ–1 ಹಾಗೂ 2 ರವರನ್ನು ಪರೀಕ್ಷಿಸಿ ಚಿಕಿತ್ಸೆ ನೀಡಿದ್ದರು ಎಂದು ಹೇಳಲಾದ ವೈದ್ಯಾಧಿಕಾರಿಯಾದ ಚಾಸಾ–6 ರವರು ಫ್ರಾಸಾ–6 ಎಂದು ವಿಚಾರಣೆಗೊಳಪಟ್ಟಿದ್ದು, ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ದಿಃ 30.06.2022 ರಂದು ಮಧ್ಯಾಹ್ನ 1.10 ಗಂಟೆ ಸಮಯದಲ್ಲಿ ಚಾಸಾ 1 ಹಾಗೂ 2 ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಬಂದಿರುವುದಾಗಿ ಹಾಗೂ ಅವರನ್ನು ತಾನು ಪರೀಕ್ಷೆ ಮಾಡಿ ಚಿಕಿತ್ಸೆ ನೀಡಿರುವ ಬಗ್ಗೆ ಹಾಗೂ ಅವರಿಗೆ ಆದ ಗಾಯದ ಬಗ್ಗೆ ನಿಪಿ-3 ಹಾಗೂ 4 ರಂತೆ ಗಾಯದ ಪ್ರಮಾಣ ಪತ್ರಗಳನ್ನು ನೀಡಿರುವ ಬಗ್ಗೆ ಸಾಕ್ಷ್ಯ ನುಡಿದಿರುವುದು ಕಂಡುಬಂದಿರುತ್ತದೆ. ಆದರೆ ಇವರು ಅರೋಪಿಗಳ ಪರ ವಕೀಲರು ನಡೆಸಿದ ಪಾಟಿಸವಾಲಿನಲ್ಲಿ ಚಾಸಾ 1 ರವರಿಗೆ ಆಗಿರುವ ಗಾಯ ಸಾಮಾನ್ಯವಾಗಿ ಬೇಲಿ ಮುಳ್ಳಿನಿಂದ ತರಚಿದರೆ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಚಾಸಾ 2 ರವರಿಗೆ ಆಗಿರುವ ಗಾಯ ಗಟ್ಟಿ ನೆಲದ ಮೇಲೆ ಬಿದ್ದರೆ ಆಗುವ ಸಾಧ್ಯತೆ ಇದೆ ಎಂದರೆ ಸರಿ ಎಂದು ಉತ್ತರಿಸಿರುವುದು ಕಂಡುಬಂದಿರುತ್ತದೆ. ಇವರ ಈ ಉತ್ತರವನ್ನು ಗಮನಿಸಿದಾಗ ಹಾಗೂ ಅಭಿಯೋಜನೆಯ ಪ್ರಕರಣದ ಪ್ರಮುಖ ಸಾಕ್ಷಿದಾರರ ಸಾಕ್ಷ್ಯವನ್ನು ಹಾಗೂ ಅಭಿಯೋಜನೆಯ ಪ್ರಕರಣದ ಹಿನ್ನೆಲೆಯನ್ನು ನೋಡಿದಾಗ ಚಾಸಾ-1, 2 ರವರಿಗೂ ಹಾಗೂ ಆರೋಪಿಗಳಿಗೂ ಜಮೀನಿನ ವಿಚಾರದಲ್ಲಿ ಹಳೆಯ ವೈಮನಸ್ಸು ಇರುವುದು ಕಂಡುಬಂದಿದ್ದು, ಇದು ನಿಜವಾಗಿಯೂ ಅಭಿಯೋಜನೆಯ ಪ್ರಕರಣದಂತೆ ಘಟನೆ ನಡೆದಿದೆಯೇ ಅಥವಾ ಘಟನೆ ನಡೆದು ಆರೋಪಿಗಳು ಕೃತ್ಯ ಎಸಗಿದ್ದರಿಂದಲೇ ನಿಪಿ-3 ಹಾಗೂ 4 ರಲ್ಲಿ ತಿಳಿಸಿರುವಂತೆ ಚಾಸಾ-1 ಹಾಗೂ 2

ರವರಿಗೆ ಗಾಯವಾಗಿದೆಯೇ ಅಥವಾ ಚಾಸಾ-6 ರವರು ತನ್ನ ಪಾಟೀಸವಾಲಿನಲ್ಲಿ ಒಪ್ಪಿಕೊಂಡಿರುವಂತೆ ಎಲ್ಲಿಯಾದರೂ ಚಾಸಾ-1 ಹಾಗೂ 2 ರವರು ತಾವೇ ಬಿದ್ದು ಸದರಿ ಗಾಯಗಳನ್ನು ಮಾಡಿಕೊಂಡು ಆರೋಪಿಗಳ ವಿರುದ್ಧ ನಿಪಿ-1 ರಂತೆ ದೂರನ್ನು ನೀಡಿದ್ದಾರೆಯೇ ಎನ್ನುವ ಬಗ್ಗೆ ಅನುಮಾನಕ್ಕೆ ಎಡೆಮಾಡಿಕೊಡುತ್ತದೆ. ಇನ್ನು ಅಭಿಯೋಜನೆಯ ಪ್ರಕರಣದ ಪ್ರಮುಖ ಸಾಕ್ಷಿದಾರರಾದ ಚಾಸಾ-1 ರಿಂದ 5 ರವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣವನ್ನು ರುಜುವಾತು ಪಡಿಸುವಲ್ಲಿ ಯಾವುದೇ ನಿಟ್ಟಿನಲ್ಲಿ ಸಹಕಾರಿಯಾಗದೇ ಇರುವುದು ಕಂಡುಬಂದಿದ್ದು, ಕೇವಲ ಚಾಸಾ-1 ಹಾಗೂ 2 ರವರನ್ನು ಪರೀಕ್ಷಿಸಿ ಚಿಕಿತ್ಸೆ ನೀಡಿದ್ದರು ಎಂದು ಹೇಳಲಾದ ವೈದ್ಯರಾದ ಚಾಸಾ-6 ರವರ ಸಾಕ್ಷ್ಯದಿಂದಲೇ ಮಾತ್ರ ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತು ಪಡಿಸಿದೆ ಎಂದು ಹೇಳಲು ಬರುವುದಿಲ್ಲ. ಇವರ ಸಾಕ್ಷ್ಯವನ್ನು ಚಾಸಾ-1 ರಿಂದ 5 ರವರ ಸಾಕ್ಷ್ಯಕ್ಕೆ ಪೂರಕವಾಗಿ ಪರಿಗಣಿಸಬೇಕೆ ಹೊರತು ಇವರ ಸಾಕ್ಷ್ಯದಿಂದಲೇ ಮಾತ್ರ ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತು ಪಡಿಸಿದೆ ಎಂದು ಹೇಳಲು ಬರುವುದಿಲ್ಲ.

31. ಇನ್ನು ಈ ಪ್ರಕರಣದ ಇನ್ನೊಬ್ಬ ಪ್ರಮುಖ ಸಾಕ್ಷಿದಾರರು ಹಾಗೂ ಪ್ರಕರಣ ದಾಖಲಿಸಿಕೊಂಡು, ತನಿಖೆಯನ್ನು ಪೂರೈಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ ಪೊಲೀಸ್ ಅಧಿಕಾರಿಯಾದಂತಹ ಚಾಸಾ–7 ರವರು ಫ್ರಾಸಾ–7 ಎಂದು ವಿಚಾರಣೆಗೊಳಪಟ್ಟಿದ್ದು, ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ 1 ರವರಿಂದ ದೂರನ್ನು ಸ್ವೀಕರಿಸಿ, ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ನಿಪಿ-2 ರಂತೆ ಮಹಜರ್ ಜರುಗಿಸಿ ಮುದ್ದೆಮಾಲು-1 ರಿಂದ 3 ನ್ನು ಅಮಾನತ್ತುಪಡಿಸಿಕೊಂಡಿರುವ ಬಗ್ಗೆ ಹಾಗೂ ಸಾಕ್ಷಿದಾರರುಗಳ ಹೇಳಿಕೆಗಳನ್ನು ದಾಖಲಿಸಿಕೊಂಡು ಆರೋಪಿಗಳಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 41 ರಡಿಯಲ್ಲಿ ನೋಟಿಸ್ ಅನ್ನು ಜಾರಿಗೊಳಿಸಿ ಬಿಡುಗಡೆ ಮಾಡಿದ ಬಗ್ಗೆ ಹಾಗೂ ಪ್ರಕರಣದಲ್ಲಿ ತನಿಖೆ ಪೂರ್ಣಗೊಳಿಸಿ ಅಂತಿಮ ವರದಿ ಸಲ್ಲಿಸಿರುವ ಬಗ್ಗೆ ಸಾಕ್ಷ್ಯ ನುಡಿದು ಅಭಿಯೋಜನೆಯ ಪ್ರಕರಣಕ್ಕೆ ಸ್ವಲ್ಪ ಮಟ್ಟಿಗೆ ಪೂರಕ ಸಾಕ್ಷ್ಯ ನುಡಿದಿರುವುದು

ಕಂಡುಬರುತ್ತದೆ. ಆದರೇ ಮೇಲೆ ಹೇಳಿದಂತೆ ಅಭಿಯೋಜನೆ ಪ್ರಕರಣದ ಪ್ರಮುಖ ಸಾಕ್ಷಿದಾರರಾದಂತಹ ಚಾಸಾ-1 ರಿಂದ 5 ರವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣವನ್ನು ರುಜುವಾತುಪಡಿಸುವಲ್ಲಿ ಯಾವುದೇ ನಿಟ್ಟಿನಲ್ಲಿ ಸಹಕಾರಿಯಾಗದೇ ಇದ್ದು ಅವರ ಸಾಕ್ಷ್ಯದಿಂದ ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತುಪಡಿಸಲು ವಿಫಲವಾದ ಕಾರಣ ಕೇವಲ ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು ಎಂದು ಹೇಳಲಾದ ಚಾಸಾ-7 ರವರ ಸಾಕ್ಷ್ಯದಿಂದಲೇ ಮಾತ್ರ ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತುಪಡಿಸಿದೆ ಎಂದು ಹೇಳಲು ಬರುವುದಿಲ್ಲ. ಇವರ ಸಾಕ್ಷ್ಯವನ್ನು ಅಭಿಯೋಜನೆಯ ಪ್ರಕರಣದ ಪ್ರಮುಖ ಸಾಕ್ಷಿದಾರರಾದಂತಹ ಚಾಸಾ-1 ರಿಂದ 5 ರವರ ಸಾಕ್ಷ್ಯದ ಜೊತೆ ಪೂರಕವಾಗಿ ಪರಿಗಣಿಸಬೇಕೆ ಹೊರತು ಇವರ ಸಾಕ್ಷ್ಯದಿಂದಲೇ ಮಾತ್ರ ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತು ಪಡಿಸಿದೆ ಎಂದು ಹೇಳಲು ಬರುವುದಿಲ್ಲ. ಇನ್ನು ಈ ಪ್ರಕರಣದಲ್ಲಿ ಚಾಸಾ-7 ರವರೇ ಚಾಸಾ-1 ರವರಿಂದ ದೂರನ್ನು ಸ್ವೀಕರಿಸಿ, ಪ್ರಕರಣವನ್ನು ದಾಖಲಿಸಿ ಇವರೇ ಈ ಪ್ರಕರಣದಲ್ಲಿ ತನಿಖೆಯನ್ನು ಕೈಗೊಂಡು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ಒಬ್ಬರೇ ವ್ಯಕ್ತಿಯಾಗಿದ್ದು, ಇವರ ಸಾಕ್ಷ್ಯವನ್ನು ಸಂಪೂರ್ಣವಾಗಿ ಪರಿಗಣಿಸಲು ಬರುವುದಿಲ್ಲ. ಹೀಗೆ ಮೇಲೆ ಹೇಳಿದ ಎಲ್ಲಾ ಕಾರಣಗಳಿಂದ ಅಭಿಯೋಜನೆಯಲ್ಲಿ ತಿಳಿಸಿರುವಂತೆ ಆರೋಪಿಗಳು ಅಕ್ರಮಕೂಟ ಕಟ್ಟಿಕೊಂಡು, ಮಚ್ಚು ಹಾಗೂ ದೊಣ್ಣೆಗಳನ್ನು ಹಿಡಿದುಕೊಂಡು ದೊಂಬಿ ಮಾಡಿ, ಚಾಸಾ–1 ಮತ್ತು 2 ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿ, ಚಾಸಾ–1 ಮತ್ತು 2 ರವರು ಜಮೀನಿಗೆ ಹಾಕಿದ್ದ ಬೇಲಿಯ ಕಂಬಗಳನ್ನು ಮುರಿದು ಸುಮಾರು 30 ಸಾವಿರದಷ್ಟು ನಷ್ಟ ಮಾಡಿ ಚಾಸಾ–1 ಮತ್ತು 2 ರವರಿಗೆ ಮಚ್ಚು ಹಾಗೂ ದೊಣ್ಣೆಯಿಂದ ಹಲ್ಲೆ ಮಾಡಿ, 3 ಹಾಗೂ 4 ನೇ ಆರೋಪಿಗಳು ಚಾಸಾ–1 ಮತ್ತು 2 ರವರಿಗೆ ಕೊಲೆ ಬೆದರಿಕೆ ಹಾಕಿ, 5 ನೇ ಆರೋಪಿ ಇತರೆ ಆರೋಪಿಗಳಿಗೆ ಕೃತ್ಯವನ್ನು ಎಸಗಲು ಕುಮ್ಮಕ್ಕು ನೀಡಿರುತ್ತಾರೆ ಎಂಬ ಅಂಶವನ್ನು ರುಜುವಾತು ಪಡಿಸುವಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ

ವಿಫಲವಾಗಿರುತ್ತದೆ ಎಂತಲೆ ಹೇಳಬಹುದು. ಆದ್ದರಿಂದ ಈ ಎಲ್ಲಾ ಕಾರಣಗಳಿಂದ 1 ರಿಂದ 5 ನೇ ಆರೋಪಿಗಳು ಮೇಲ್ಕಂಡ ಅಪರಾಧಗಳನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ನಂಬಲಾರ್ಹವಾದ ಹಾಗೂ ಕಾನೂನುಬದ್ಧವಾದ ಸಾಕ್ಷ್ಯಾಧಾರಗಳಿಂದ ರುಜುವಾತುಪಡಿಸಲಾಗದ ಕಾರಣ ಸಂಶಯದ ಲಾಭವನ್ನು 1 ರಿಂದ 5 ನೇ ಆರೋಪಿಗಳಿಗೆ ನೀಡಿ **ಅಂಶ ಸಂಖ್ಯೆ 1 ರಿಂದ 6** ನ್ನು ಈ ನ್ಯಾಯಾಲಯವು **ನಕಾರಾತ್ಮಕವಾಗಿ** ಉತ್ತರಿಸುತ್ತದೆ.

32. **ಅಂಶ:7:** ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡ ಆದೇಶವನ್ನು ಈ ನ್ಯಾಯಾಲಯವು ಮಾಡಿರುತ್ತದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಈ ನ್ಯಾಯಾಲಯವು ಚಲಾಯಿಸಿ 1 ರಿಂದ 5 ನೇ ಆರೋಪಿಗಳ ವಿರುದ್ಧ ಭಾ.ದಂ.ಸಂ.ಕಲಂ 143, 147, 427, 324, 506 ಮತ್ತು 114 ಸಹವಾಚಕ 149 ರಡಿಯಲ್ಲಿ ಹೊರಿಸಲಾದ ಆರೋಪಗಳಿಂದ ಆರೋಪಿಗಳನ್ನು ದೋಷಮುಕ್ತಗೊಳಿಸಿ ನಿರ್ದೋಷಿಗಳೆಂದು ನಿರ್ಣಯಿಸಿ ಬಿಡುಗಡೆಗೆ ಆದೇಶಿಸಲಾಗಿರುತ್ತದೆ.

ಆರೋಪಿಗಳು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನಿನ ಬಾಂಡು ಮತ್ತು ಮುಚ್ಚಳಿಕೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಮುದ್ದೆ ಮಾಲು-1-ಮುರಿದ ಕಲ್ಲುಕಂಬ, ಮುದ್ದೆ ಮಾಲು-2-ದೊಣ್ಣೆ ಇವುಗಳು ಬೆಲೆಬಾಳದ ವಸ್ತುಗಳಾದ್ದರಿಂದ ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಿದೆ.

ಮುದ್ದೆ ಮಾಲು-3-ಮಚ್ಚು ಇದು ಬೆಲೆಬಾಳುವ ವಸ್ತುವಾಗಿರುವುದರಿಂದ ಅಫೀಲು ಅವಧಿ ಮುಗಿದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಿದೆ.

(ತೀರ್ಪನ್ನು ಉಕ್ತಲೇಖನದ ಮೇರೆಗೆ ಗಣಕಯಂತ್ರದ ಮೇಲೆ ನೇರವಾಗಿ ಶೀಘ್ರಲಿಪಿಗಾರರಿಂದ ಗಣಕೀಕರಿಸಿ ನಂತರ ಓದಿ, ತಿದ್ದಿ, ನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕ 28 ನೇ ಏಪ್ರಿಲ್ 2026 ರಂದು ಪ್ರಕಟಿಸಲಾಯಿತು)

(**ಸಂತೋಷ ಕೊಠಾರಿ**)
C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ಹೆಚ್.ಡಿ.ಕೋಟೆ.

## <u>ಅನುಬಂಧ</u>

### <u>1. ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿಗಳ ಪಟ್ಟಿ:</u>

| | | |
|---|---|---|
| ಫ್ರಾಸಾ :1: | : | ಶ್ರೀ.ಗೋವಿಂದನಾಯಕ |
| ಫ್ರಾಸಾ :2: | : | ಶ್ರೀ.ವೆಂಕಟೇಶ ನಾಯಕ |
| ಫ್ರಾಸಾ :3: | : | ಶ್ರೀ.ವೆಂಕಟರಮಣನಾಯಕ |
| ಫ್ರಾಸಾ :4: | : | ಶ್ರೀ.ಮಾದೇವನಾಯಕ |
| ಫ್ರಾಸಾ :5: | : | ಶ್ರೀ.ಲಿಂಗನಾಯಕ |
| ಫ್ರಾಸಾ :6: | : | ಡಾಃ ಪಾರ್ಥಸಾರಧಿ |
| ಫ್ರಾಸಾ :7: | : | ಶ್ರೀ.ಗೋವಿಂದ |

### <u>2. ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ:</u>

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ)ಮತ್ತು (ಬಿ) | : | ಸಹಿಗಳು |
| ನಿಪಿ-2 | : | ಸ್ಥಳ ಮಹಜರ್ |
| ನಿಪಿ-2 (ಎ) ರಿಂದ 2(ಡಿ) | : | ಸಹಿಗಳು |
| ನಿಪಿ-3 ಮತ್ತು 4 | : | ಗಾಯದ ಪ್ರಮಾಣ ಪತ್ರಗಳು |
| ನಿಪಿ-3(ಎ) ಮತ್ತು 4(ಎ) | : | ಫ್ರಾಸಾ-6 ರವರ ಸಹಿಗಳು |
| ನಿಪಿ-5 | : | ಪ್ರಥಮ ವರ್ತಮಾನ ವರದಿ |

ನಿಪಿ–5(ಎ) : ಫ್ರಾಸಾ–7 ರವರ ಸಹಿ

**3. ಅಭಿಯೋಜನೆಯ ಪರ ಗುರುತಿಸಲಾದ ಮು.ಮಾ– ಪಟ್ಟಿಃ**

ಮುದ್ದೆ ಮಾಲು –1 : ಮುರಿದ ಕಂಬ
ಮುದ್ದೆ ಮಾಲು –2 : ದೊಣ್ಣೆ
ಮುದ್ದೆ ಮಾಲು –3 : ಮಚ್ಚು

**4. ಆರೋಪಿತರ ಪರ ವಿಚಾರಣೆಗೊಳಪಟ್ಟ ಸಾಕ್ಷಿಗಳ ಪಟ್ಟಿಃ**

–ಇಲ್ಲ–

(**ಸಂತೋಷ ಕೊಠಾರಿ**)
C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ಹೆಚ್.ಡಿ.ಕೋಟೆ.